SRI MOHAN HEGDE COLLECTIONS

"ಹವ್ಯಾಕ ಸುಬೋಧಪು
ಕನ್ನಡ ವಾರ ಪತ್ರಿಕೆ

(1887) ONLY FEW PAPERS

SRI MOHAN HEGDE COLLECTIONS

"ಹವ್ಯಾಕ ಸುಬೋಧವು

ಕನ್ನಡ ವಾರ ಪತ್ರಿಕೆ

(1887) ONLY FEW PAPERS

ಕನ್ನಡ ಟ್ರಾನ್ಸ್ಲೇಟರ ... ತ್ರಿ ... ರಾ. ಸಾ. ಕರಂದೀಕರರ ಮೇಲೆ ನಮ್ಮ ಬಂಧುಗಳಾದ "ಕನ್ನಡ ಸುವಾರ್ತೆ ಕರ್ತ..." [illegible] ... ಅವರು ಬರೆದ ಗ್ರಂಥ ಸಹ ... [illegible]

... ಅನ್ಯಥಾ ... ಅಭಿಪ್ರಾಯ ... [illegible] ... ಇನ್ನೊಮ್ಮೆ ವಿಚಾರ ಮಾಡಿಕೊಳ್ಳಬಾರದ್ಯಾಕೆ?

ಈ ವಿಷಯದಲ್ಲಿ ನಮ್ಮ ಬಂಧುಗಳಾದ ಧಾರವಾಡ ವೃತ್ತ ಕರ್ತರು ಸಹ ಕೆಲವು ವಿಷಯಗಳನ್ನು ಬರೆಯುತ್ತಾರೆ. ಆದರೆ ಅದರಲ್ಲಿ ರಾ. ಸಾ. ಕರಂದೀಕರ ಇವರ ವಿಷಯವಾಗಿ ಬರೆದದ್ದು ಮಾತ್ರ ಯೋಗ್ಯವಿದ್ದಾಗ್ಯೂ ಈಗ ಸರಕಾರಿ ಸ್ಕೂಲುಗಳಲ್ಲಿ ನಡೆಯುತ್ತಲಿರುವ ಪುಸ್ತಕಗಳನ್ನು ರಚಿಸಿದ ರಾ. ರಾ. ಗಂಗಾಧರ ಮಡಿವಾಳೇಶ್ವರ ತುರಮರಿಯವರ ಭಾಷೆಗಳನ್ನು ಕುರಿತು ಟೀಕೆ ಮಾಡುವವರಿಗೆ ದೋಷ ಕೊಟ್ಟದ್ದು ಮಾತ್ರ ಸರಿಯಲ್ಲ. ಯಾಕಂದರೆ, ಕನ್ನಡ ೪-೭ನೇ ಪುಸ್ತಕಗಳಲ್ಲಿ ಇರುವ ಅಶುದ್ಧ ಶಬ್ದಗಳ ಮೇಲೆ ಟೀಕಾ ಮಾಡುತ್ತ ಹೋದರೆ ಅವಕ್ಕಾಗಿಯೇ ಮತ್ತೊಂದು ಅಂಥಾ ಪುಸ್ತಕವನ್ನು ಬರೆಯ ಬೇಕಾದೀತು. ಶಾಲೋಪಯೋಗಿ ಪುಸ್ತಕಗಳಲ್ಲಿ ಅಂಥ ತಪ್ಪುಗಳು ಇರಬಾರದೆಂದು ಪ್ರತಿ ಒಬ್ಬ ಕನ್ನಡಾಭಿಮಾನಿಯೂ ಕೂಡಾ ವಿಷಾದಿಸ ತಕ್ಕದ್ದು ಯೋಗ್ಯವದೆ. ಆದ್ದರಿಂದ ಇದೊಂದು ವಿಷಯದಲ್ಲಿ ಮಾತ್ರ ನಮ್ಮ ಧಾರವಾಡ ವೃತ್ತಕರ್ತರು ಇನ್ನೊಮ್ಮೆ ವಿಚಾರ ಮಾಡಿ ಬರೆಯ ಬಹುದಿತ್ತು.

ಸ್ವಬಲವಿಷಯ.

ಮಿ. ನ್ಯಾ ಪ್ರೈಸ್ ರಾಯ್ ಲಾರ್ಡ ಡಫರಿನ್ ಥೋರೆಗಳವರು ಅಮದಾಬಾದಿಗೆ ಹೋದಾಗ ಅವರಿಗೆ ೨ ಮಾನಪತ್ರಗಳು ಬಂದಿದ್ದವು. ಒಂದು ಮುನಸಿಪಾಲಟಿಯವರಿಂದಾ ಒಂದು ಅಲ್ಲಿಯ ಪ್ರಜೆಗಳಿಂದ! ಅದರ ಪೈಕಿ ಮುನಸಿಪಾಲಟಿಯವರು ಕೊಟ್ಟ ಮಾನಪತ್ರವನ್ನು ಅವರು ಸ್ವೀಕರಿಸಿ ಪ್ರಜೆಗಳು ಕೊಟ್ಟ ಮಾನ ಪತ್ರವನ್ನು ತಾವು ಸ್ವೀಕರಿಸುವದಿಲ್ಲವೆಂದು ಹೇಳಿ ಹಿಂದಕ್ಕೆ ಕೊಟ್ಟರು. ಇದರ ಕಾರಣವೇನೆಂದ್ರೆ; ಮುನಸಿಪಾಲಟಿಯವರು ಕೊಟ್ಟ ಪತ್ರದಲ್ಲಿ ಫಕ್ತ ಸಾಹೇಬರವರ ಸ್ತುತಿ ಮಾತ್ರವಿತ್ತು. ಪ್ರಜೆಗಳು ಕೊಟ್ಟ ಮಾನಪತ್ರದಲ್ಲಿ ಕೆಲವು ತಮ್ಮ ದುಃಖಗಳನ್ನು ತೋರಿಸಿದ್ದರು. ಅವರದ

ಜನರಿಗೆ ತಮ್ಮ ಅನ್ಯಂತರವಿದ್ದವು. ... ಯಾವಾಗಲು ... [illegible] ... ಮಹಜನರ ... [illegible] ... ವಿಚಾರವೇನೂ ಅಗತ್ಯವಿಲ್ಲ. ಮಾನಪತ್ರವನ್ನು ಅವರ ದೊಡ್ಡಸ್ತಿಕೆ ಗೋಸ್ಕರ ಮಾತ್ರ ಕೊಟ್ಟರೆ ಅದರ ಮೇಲೆ ನಮ್ಮ ಆಕ್ಷೇಪವಿಲ್ಲ. ಅವರ ರಾಜ್ಯಭಾರಕ್ರಮವನ್ನು ಕುರಿತು ವರ್ಣಿಸಿ ಮಾನಪತ್ರ ಕೊಡುವದಕ್ಕೆ ಅವರು ನಮ್ಮ ಮೇಲೆ ಮಾಡಿದ ಮಹದುಪಕಾರವಾದರು ಏನು?

... ಹೋದೆಗೆ ರಾ. ... [illegible] ... ಯುರೋಪಿಯನ್ ಜನರ ಪ್ರೀತ್ಯರ್ಥವಾಗಿ ... ಮಾಡುವದನ್ನು ನೋಡಿ ಆ ಹಣವು ಇತರ ವಿನಾವರೊಂದು ... ಅವರ ಕೀರ್ತಿಯು ಪ್ರಜೆಗಳಲ್ಲಿ ಹೆಚ್ಚಾಗುತ್ತಿತ್ತಲ್ಲದೆ ಪುಣ್ಯ ಸಹ ದೊರೆಯುತ್ತಿತ್ತು. ಇದಕ್ಕೆ ಹೊರತಾಗಿ ವರ್ತಿಸುವದರಿಂದ ಪುಣ್ಯವಿಲ್ಲ, ಪುರುಷಾರ್ಥವಿಲ್ಲ.

ನಮ್ಮ ಹಿಂದೂ ಜನರ ಅಭಿವೃದ್ಧಿಯಲ್ಲವೂ ಒಂದು ಜಾತಿ ಮಾತ್ಸರ್ಯದಿಂದ ತಲೆ ಕೆಳಗಾಗಿ ರುತ್ತದೆಂಬದನ್ನು ಸುಜ್ಞಾನಿಗಳಾದ ಕೆಲವು ವಿದ್ವಾಂಸರು ಇದನ್ನು ಹೋಗಲಾಡಿಸಲೂ ಪ್ರಯತ್ನ ಪಡುತ್ತಾರೆ. ಆದರೆ ಕೆಲವು ಆಧುನಿಕ ಪಂಡಿತ ವೇದಧಾರಿಗಳಿಗೆ ಮಾತ್ರ ಮೇಲಿನ ವಿದ್ವಾಂಸರ ಮತವು ಮನಃಪೂರ್ವಕ ಮಾನ್ಯವಾಗಿದ್ದರೂ ಬಾಹ್ಯವಾಗಿ ತಮ್ಮ ನಿಜಹೇತುವನ್ನು ತೋರಿಸದೆ; ಅನ್ಯ ಮಾರ್ಗದಿಂದ ತಮ್ಮ ಇಷ್ಟಾರ್ಥ ಸಿದ್ಧಿಸಬೇಕೆಂದು ಯುಕ್ತಿ ಪ್ರಯುಕ್ತಿಗಳಿಂದ ಪ್ರಯತ್ನಿಸುತ್ತಾರೆ. ಆದರೆ ಅವರ ಮನೋಭಿಪ್ರಾಯವಲ್ಲ ಮುಚ್ಚಿಟ್ಟ ಕಸ್ತುರಿಯ ಭರಣಿಯಂತೆಯೇ ಸರಿ ಎಂದು ಗ್ರಹಿಸಿ ತಮ್ಮ ಮನೋಭಿಪ್ರಾಯವನ್ನು ಹಿಂದಕ್ಕಿಟ್ಟರೆ ನಮ್ಮ ದೇಶ ಮಾತೆಯನ್ನು ಸತ್ಕಾರ ಮಾಡಿದಂತಾಗುವದು.

ಕನ್ನಡ ಮುಲ್ಕಿಯೊಳಗೆ ಇತ್ತಲಾಗಿ ಜಾತಿ ಮಾತ್ಸರ್ಯವು ಬಹು ತರದಿಂದ ಪ್ರಬಲಗೊಳ್ಳುವಂತೆ ಕಾಣುತ್ತದೆ. ಹೀಗೆ ಒಬ್ಬರಿಗೊಬ್ಬರು ಮತ್ಸರ ಮಾಡುವದರಿಂದ ಪರಸ್ಪರ ತಮಗೊಂದು ವಿಧವಾದ ಲಾಭವಿರುತ್ತದೆಂದು ತಿಳಕೊಂಡು ತಮ್ಮ ತಮ್ಮ ನಡತೆ ನಡಾವಳಿಗಳನ್ನು ನೀತಿ ಬಾಹ್ಯವಾಗಿ ಅನುಸರಿಸುತ್ತಿರುವದು ಅಜ್ಞಾನ ಮೂಲದ ದಿಂಕನಂತೆ ಚಮತ್ಕಾರಿಕ್ಕೆ ಪ್ರಾರಂಭವಾಗಿರುತ್ತದೆ. ಕೆಲವರು ಯುರೋಪಿಯನ್ ಜನರ ಹಿತ ಪಡೆಯುವವರ ದೆಸೆಯಿಂದಲೂ, ಕೆಲವರು ಹಿಂದಕ್ಕುರುವವರು ಮುಂದೆ ಬಂದರೆಂತಲೂ, ಕೆಲವರು ಮುಂದಿನವರಿಗಿಂತಲೂ, ತಾವು ಮತ್ತಿಷ್ಟು ಮುಂದಕ್ಕೆ ಹೋಗಬೇಕೆಂತಲೂ, ಮತ್ತು ಕೆಲವರು ಅನ್ಯರುವೃದ್ಧಿ

ಯಿಂದ ತಮಗೆ ಮಹತ್ತಾದ ಹಾನಿ ಸಂಭವಿಸಿ; ತೆಂತಲೂ ಮತ್ತು ಕೆಲವರು ಬೇರೆಯವರು ವೃದ್ಧಿಹೊಂದಿದರೆ ತಮ್ಮ ಲಾಭದ ಭಂಡಾರಕ್ಕೇ ಮಣ್ಣು ಮುಚ್ಚಿ ಹೋದೀತೆಂತಲೂ ಈ ರೀತಿ ಪರಸ್ಪರ ವೈರ ವೃದ್ಧಿಯು ಬೇರು ಬೇರಾಗಿ ದಿನ ದಿನಕ್ಕೆ ನಾಲ್ಕು ಕಡೆಗೂ ಪಸರಿಸುವದಕ್ಕೆ ಪ್ರಾರಂಭವಾದಿ ಇದೆ. ಹೀಗಾದರಿಂದ ನೋಡಿದರೆ ಇದು ಪ್ರಳಯ ಕಾಲದಲ್ಲಿ ಬರುವ ದುಂದುಭಿ ನಾದವೇ ಇರಬಹುದೇನೋ ಎಂತ ಸಂಶಯ ಬರುತ್ತದೆ. ಆದ್ದರಿಂದ ಅಲ್ಪಮ ಈ ಜಾತಿ ಮಾತ್ಸರ್ಯವು ಕೇವಲ ಪ್ರಳಯ ಸ್ವರೂಪವಾಗಿರುತ್ತದೆಂತಲೂ ಇದರಿಂದ ಯಾವ ಜನರ ಹೆತು ಕೂಡಾ ಸಿದ್ಧಿ ಸದೆ; ಸರ್ವತ್ರ ಮಹತ್ತರ ಹಾನಿ ಸಂಭವಿಸೀತೆನ್ನುವದನ್ನು ಸಹ ... ಹಿಂದೂ ... [illegible] ... ರ ದೃಷ್ಟಿಯಿಂದ ನಿರೀಕ್ಷಿಸಿದರೆ ಸಹಜವೇ ಕಂಡು ಬರುವದು. ಪರಸ್ಪರ ಪ್ರೀತಿ ಮಾಡುವದರಿಂದ ಏಕೆ ಒಂದು ವಿಧವಾದ ಲಾಭವು ಎಷ್ಟು ಮಟ್ಟಿಗೆ ಕಾಣಬಂದೀತೋ? ಅದರಂತೆ ದ್ವೇಷ ಮಾಡುವದರಿಂದ ಅದಕ್ಕೂ ಶತಧಾ ಹಾನಿಯು ಬಹು ಬೇಗನೆ ಸಂಭವಿಸೀತೆನ್ನುವದರಲ್ಲಿ ಏನೇನೂ ಸಂಶಯವಿಲ್ಲ. ಆದ್ದರಿಂದ ಅಲ್ಲಿಯ ಜನರು ಇದನ್ನು ಮನಃಪೂರ್ವಕ ವಾಗಿ ತಮ್ಮೊಳಗೆ ಮಿತ್ರತ್ವವನ್ನು ಇಟ್ಟು ವಾಡಿಕೊಳ್ಳಲೆಂದು ಆಶಿಸುತ್ತೇವೆ.

ಮುಂಬಯಿ.

ನಕ್ಕೆಲಾಜ ಕೋರ್ಟಿನ ರಜಿಸ್ಟ್ರರ ಕೆಲಸವನ್ನು ರಾ. ಕೃ. ಆನಂದರಾವ ಭಾಸ್ಕರಜೀ ಇವರಿಗೆ ನೇಮಿಸಿದರು.

... ಯ ಪ್ಲ್ಯಾಕೋರ್ಟಿಗೆ ಅಕ್ಟೋಬರ ತಿಂಗಳದ ರಜವು ಸಲುವಾಗಿ ಬಂದ ಇರುವದು, ಈ ನವಂಬರ ... ತಾರೀಖಿನ ದಿವಸ ಕೋರ್ಟು ಪುನಃ ಶುರುವಾಯಿತು.

ಹಿಂದುಸ್ಥಾನದ ಸರ್ವಾಧಿಪತಿಗಳಾದ ಲಾರ್ಡ ಡಫ್ರಿನ್ ಥೋರೆಗಳವರು ಮೊನ್ನೆ ತಾರೀಖು ೧೫ನೇ ದಿನದ ಮಧ್ಯಾಹ್ನದ ೩ಕ್ಕೆ ಘಂಟೆ ಸಮಯಕ್ಕೆ ಮುಂಬಯಿಗೆ ಬಂದು ತಲಪಿದರು. ಇವರ ಆಗಮನದ ನಿರೀಕ್ಷಣೆಯಿಂದ ಅನೇಕ ಸಂಸ್ಥಾನಿಕ ರಾಜರೂ ದೊಡ್ಡ ದೊಡ್ಡ ಅಧಿಕಾರಿಗಳೂ ಕೂಡಾ ಎದುರು ಹೋಗಿ ಸಂಭ್ರಮದಿಂದ ಕರಕೊಂಡು ಬಂದರು.

ವಾರದ ಸಂತಿ ವೃತ್ತಾಂತ.

ಆರ್ಚಬಾಲಿನ್ ಬೆಲ್ ಸಾಹೇಬರು ಪರದೇಶಗಳ ವಿಷಯವಾಗಿ ಭಾಷಣವನ್ನು ಅಂಡರ್ಪೋಲಿನ ಗಿಲ್ಡ ಹಾಲಿನೊಳಗೆ ಮಾಡಿದರು. ಅದರ ಸಾರಾಂಶವನ್ನು ಈ ಕೆಳಗೆ ದರ್ಶಿಸಿ ಅದೆ.

ಅಯರ್ಲಂಡದ ವಿಷಯಕ್ಕೆ— ನ್ಯಾಯಪಕ್ಷ ಸರಕಾರದವರು ತಮ್ಮ ಆಳಿಕೆಯೊಳಗಿನ ಎಲ್ಲಾ ದೇಶಗಳಿಗೂ ಕೂಡ ಹ್ಯಾಗೆ ಯೋಗ್ಯವಾದ ನ್ಯಾಯ ಕಾಯಿದೆಯನ್ನು ಏರ್ಪಾಡು ಮಾಡುತ್ತಾರೋ ಅದರಂತೆ ನಮ್ಮ ವಿಲಾಯತಿ ಸರಕಾರದವರು ಅಯರ್ಲಂಡದ ಬಗ್ಗೆ ಯೋಗ್ಯ ನ್ಯಾಯ ಸೂತ್ರವನ್ನು ಕಲ್ಪಿಸ ಬೇಕು; ಹಾಗೂ ಅಲ್ಲಿಯ ಪ್ರಜಾಭಿಮಾನವನ್ನು ಪೋಷಿಸ ಬೇಕು.

ಈಜಿಪ್ತ— ಸರಕಾರದವರು ಇದುವರಲ್ಲಿ ಯಾವ ಉದ್ದೇಶದಿಂದ ಕೃತ್ರ ಸೈನ್ಯವನ್ನು ಇಟ್ಟಿದ್ದರೋ ಅದಕ್ಕೆ ಅನುಸರಿಸಿ ಸೈನ್ಯ ಇಟ್ಟರೆ ಸಾಕು. ಯಾಕಂದರೆ ಈ ದೇಶವು ಸುಧಾರಿಸಿದ ರೀತಿವಾದ ಕಾಲಣ ಇನ್ನು ಕ್ಷೀತಿ ಎರಡನೇ ಯಾರೂ ಡಚ್ಚಿ ಮಾಡುವಂತೆ ಇರುವದಿಲ್ಲ. ಕಾರಣ ಇದಕ್ಕೂ ಹೆಚ್ಚಿಗೆ ಸೈನ್ಯ ಇಡುವ ಭಾಗ ಬೀಳಲಾರದು.

ರಶಿಯಾ— ಇಲ್ಲಿಯ ಜಾಮಕರಾದ ಪ್ರಿನ್ಸ ಅಲೇಕ್ಸಾಂಡರನ್ನು ಪದಚ್ಯುತ ಮಾಡಿದ್ದಕ್ಕೆ ಡಾಗೂ ರಶಿಯನ್ ಜನರು ಬಂಗೇರಿಯಗೆ ಪದ್ದತ್ತು ಮಾಡಿದ್ದರ ವಿಷಯವಾಗಿ ಕೂಡ ಸಾಡಿದ ಭಾಷಣದಲ್ಲಿ ಸ್ವಲ್ಪ ತಮ್ಮ ಅಭಿಪ್ರಾಯವನ್ನು ತೋರಿಸಿದರು.

ಬಲಗೇರಿಯಾ— ರಶಿಯನ್ ಜನರು ಇಲ್ಲಿಯವರ ಅನುಮತಿಯ ವಿನಾಯಿ ಬಲಗೇರಿಯಾ ದೇಶವನ್ನು ಪೂಕ್ಕೆ ಅಲ್ಲಿ ತಮ್ಮ ಅಧಿಕಾರವನ್ನು ಉದ್ಧಾರ ಮಾಡ ಪ್ರಯತ್ನ ಮಾಡಿದ್ದು ನ್ಯಾಯವಲ್ಲ. ಬರ್ಲಿನ್ ಒಪ್ಪಂದದಿಂದ ಇಂಗ್ಲಿಷರಿಗೂ ಆಸ್ಟ್ರೆಲಿಯಾ ದೇಶದವರಿಗೂ ಸರ್ವಜನ ಅಭಿಪ್ರಾಯ ಪ್ರಮುಖ ಲ ಬಂದಂತಿರುವದೆ. ವಿಯುಮಗಳಲ್ಲಿ ಇಂಗ್ಲಿಷ ಸರಕಾರದವರು ನಸ್ಮತಿಸ ಬೇಕು ಎಂತ—

ಈ ಭಾಷಣಗಳನ್ನು ಕುರಿತು ಕೆಲವು ಪತ್ರಕರ್ತರ ಮತ್ತು ಆಸ್ಟ್ರೇಲಿಯನ್ ಜನರು ಕೂಡ ಬಹಳ ಸಂತೋಷ ಪಟ್ಟಿರುತ್ತಾರೆ.

ವರ್ತಮಾನಸಾರ.

ಅಮೇರಿಕದೊಳಗೆ ವಾಶಿಂಗ್ಟನ ಎಂಬ ಊರಲ್ಲಿ ೧೧೦೦೦ ಗಂಡಸರೂ, ೪೦೦೦ ಹೆಂಗಸರೂ ಕೂಡ ಸರಕಾರೀ ಕೆಲಸದ ಮೇಲೆ ಇರುತ್ತಾರೆ. ಆಫೀಸಿನಲ್ಲಿ ಸ್ತ್ರೀ ಪುರುಷರ ಉದ್ಯೋಗಸನಗಳು ಕೂಡಿ ಕೂಡಿ ಇರುತ್ತವೆ. ಹೊರಗಿನ ವ್ಯೋಜನೆ ಪಕ್ವೆರೆ ಯಾವದೊಂದೇ ಕೆಲಸದಲ್ಲಾದರೂ ಪುರುಷರಕಿಂತಲೂ ಸ್ತ್ರೀಯರ ಜಕ್ಕೇ ಹುಷಾರೀ ತೋರಿಸುತ್ತಾರೆ. ಈ ಸ್ತ್ರೀ ಪುರುಷ ವ್ಯಾಪಾರರಲ್ಲಿ ಅವರೊಳಗೆ ಸ್ವಾಭಾವಿಕ ಸಂಬಂಧ ವಿದ್ದರೂ ಅಲ್ಲಿಯ ಕಾಯಿದೆಯಿಂದ ಅವರೇನೇನೂ ಬಾಧಕವಿರುವದಿಲ್ಲ. ಹೆಚ್ಚಾಗಿ ಇವರೊಳಗೆ ಲಗ್ನವಾದವರೇ ಕಡಿಮೆ, ಹಾ ... ಇಲ್ಲದೆ ನಿರ್ವಾಹವಾಗುತ್ತಿದ್ದ ದೇಶ ಅಷ್ಟು ಏಕೆ? ಹ್ಯಾಗೆ ನಡದರೂ ಸುಧಾರಿಸಿದ ಜನರಲ್ಲವೋ?

ವಾಲಿಟಾನಾ ಎಂಬ ಸಂಸ್ಥಾನದ ಮುಖ್ಯರಾದ ಠಾಕೂರ ಸಾಹೇಬರು ತಮ್ಮ ಸಹೋದರರ ಸಂಗಡ ಝಗಳ ಮಾಡುತ್ತಿರುವ ಕಾರಣವು ಸರಕಾರದವರಿಗೆ ತಿಳಿದು ಕೆಲವು ಮಧ್ಯಸ್ಥಿಕರ ಮುಖಾಂತರ ಸಮಾಧಾನ ಮಾಡಿಕೊಳ್ಳಬೇಕಾಗಿ ಅಪ್ಪಣೆ ಕೊಡಲು ಆ ಪ್ರಕಾರ ಠಾಕೂರ ಸಾಹೇಬರು ಕಾಠೇವಾಡದ ಇಬ್ಬರು ಸಭ್ಯ ಗೃಹಸ್ಥರು ಹಾಗೂ ಮಿ. ಜಸ್ಟೀಸ್ ಬರ್ಡವುಡ್ ಈ 3 ಮಂದಿಯ ಅನುಮೋದನಕ್ಕೆ ಒಪ್ಪಿ ಒಡಂಬಡಿಕೆ ಮಾಡಿಕೊಂಡರೆಂತ ತಿಳಿಯುತ್ತದೆ. ಠಾಕೂರ ಸಾಹೇಬರು ತಮ್ಮ ಸಹೋದರರನ್ನು ಕೂಡಿಕೊಂಡು ಇದ್ದರೆ ಬಹಳ ಭೂಷಣ ಹಾಗೂ ಎಲ್ಲರಿಗೂ ಸಂತೋಷ.

ಜಬಲಪುರದಲ್ಲಿ ಒಬ್ಬ ಗ್ಯಾಣಿಗರ ಜಾತಿಯವನು ತನ್ನ ಮಗಳ ಸಂಗಡ ಎಷ್ಟೋ ದಿವಸಗಳಿಂದ ವ್ಯಭಿಚಾರಕನಾಗಿದ್ದನು. ಇಂಥ ಅಘೋರ ಪಾತಕವು ನಡಿಯಬಾರದೆಂದು ಇವನಿಗೆ ಸರ್ಕಾರ ವಾಶಿ ದೇವರು ಶಿಕ್ಷೆ ಮಾಡಿದ್ದೇನಂದರೆ— ಈ ಉಭಯತರು ಒಂದು ದಿವಸ ರಾತ್ರಿ ಮನೆಯೊಳಗೆ ಮಸ್ತಾರಾಗಿ ವಿರಾಜಿಸುತ್ತಿರುವಲ್ಲಿ ಆಕಸ್ಮಿಕ ಕ್ಷೋಭೆಯಿಂದ ಈ ನರ ಕೂಡಿಕೊಂಡಂತೆ ಆಯಿತು. ಉಭಯತರು ತಾವು ಇದರಿಂದ ಮುಕ್ತರಾಗಬೇಕೆಂದು ಎಷ್ಟೋ ಉಪಾಯಗಳನ್ನು ಮಾಡಿದಾಗ್ಯೂ ದೈವ ಶಾಸನದ ಮುಂದೆ ಉಪಾಯ ನಡೆಯಲಿಲ್ಲ. 3 ದಿವಸದ ನಂತರ ಪೋಲೀಸಿಗೆ ತಿಳಿದು ಡಾಕ್ಟರರ ಕರೆಸಿ ಅವರ ಬಿಡುಗಡೆ ಮಾಡಿದರು. ಆ ಹೆಣ್ಣು ಮಗಳು ಲಜ್ಜೆಯಿಂದಲೂ ವೇದನೆಯಿಂದಲೂ ಮರಣಪಟ್ಟಳು. ಈ ನರ ಪಶುವಿಗೆ ಸರಕಾರದಿಂದ ಯೋಗ್ಯ ಶಿಕ್ಷೆ ಆಯಿತೆಂತ ಜಗದ್ಧಿತೇಚ್ಛು ಪತ್ರದ ಮೇಲಿಂದ ತಿಳಿಯುತ್ತದೆ.

ಈ ಭರತ ಖಂಡ (ಹಿಂದುಸ್ಥಾನ) ದೊಳಗೆ ನ್ಯಾಯಾಧೀಶರುಗಳದ್ದು ಅವುಗಳ ಪೈಕಿ ೭೦ ಇಂಗ್ಲೀಷರು ಬಕೀಲ ಮುಂಬಯಿ ಇಲಾಖೆಯಲ್ಲೇ ಇರುತ್ತವೆ.

ಮೇ. ಎಸ್. ಬಿ. ಕೃಷ್ಣಾಸ್ವಾಮಿಯ್ಯಂಗಾರ ಮಾಜಿ ಅ. ಕಮಿಷನರ್ ಮೈಸೂರ ಇವರ ದ್ವಿತೀಯ ಕುಮಾರರಾದ ರಾಮಸ್ವಾಮಿಯ್ಯಂಗಾರರವರು ವಿಲಾಯತಿಯಲ್ಲಿ ಬ್ಯಾರಿಸ್ಟರಿ ಪರೀಕ್ಷೆಯಲ್ಲಿ ಪಾಸಾದರೆಂತ ಕೇಳಿ ನಾವು ತುಂಬಾ ಆನಂದ ಪಡುತ್ತೇವೆ.

ಪತ್ರವ್ಯವಹಾರ.

ಈ ಸದರಿನ ಕೆಳಗಿನ ಮಜಕೂರು ಪತ್ರಕರ್ತರ ಅಭಿಪ್ರಾಯದಂತೆ ಇರುತ್ತದೆಂತ ತಿಳಿಯಲಿಕ್ಕಿಲ್ಲ.

ರಾ. ರಾ. ಹಿತ್ಯಕ ಸುಬೋಧ ಪತ್ರಕರ್ತರಿಗೆ.

ವಿ. ವಿ. ನಮ್ಮ ಮುಂಬಯಿ ಸರಕಾರದ ವಿಷಯವಾಗಿ ಸರ್ ಗಾರ್ಜಿ ನೇ ಇದರ ಪರಿಗೆ ಶಾಸನಾ ನಿರಾಸಿಗ ಳಿಗೆ ಎಷ್ಟರ ಮಟ್ಟಿಗೆ ಪ್ರೋತ್ಸಾಹ ಬುದ್ಧಿ ಇತ್ತೋ! ಅದ ಸರ್ ಗಾರ್ಜ ನೇ ಇವರಿಂದ ಕಡಿಮೆಯಾಗಲಿಕ್ಕೆ ಪ್ರಾರಂಭವಾಗಿರುತ್ತದೆ. ಇದಲ್ಲದೆ ಅಲ್ಲಿಯ ಕೆಲವು ಅಧಿಕಾರಿಗಳು ಇದುವರೆಗೆ ನಡಿಸಿದ ವಿಷಯಗಳಿಗೆ ಸರಕಾರದವರ ಅನುಮೋದನದ ಕೊಡ್ದು ಈ ರೀತಿ ದಾಕ್ಷಿಣ್ಯ ಮಾಡಿಯ ನಡಿಸಲಿಕ್ಕೆಬೇಕ್ಕೆರ ಬಿಡುವರೋ ಎಂದು ಅಲ್ಲಿಯ ಭೂಲೋಕ ಜನರೆಲ್ಲರು ತಿಳಿದಿದ್ದಾರೆಂಬದರಲ್ಲಿ ಸನ್ನೇಹವೂ ಅಂದೇಶ ತೋರುವದಿಲ್ಲ.

ರಾಜ್ಯಾಡಳಿತೆಯ ಮುಖ್ಯರು ಪ್ರಜೆಗಳ ವಿಚಾರವನ್ನು ರಿತ್ತರೆಂದು ತಿಳುಕೊಳ್ಳುವದರಲ್ಲಿ ಪೂರ್ಣ ಲಕ್ಷ್ಯಗೊಟ್ಟು ಅವರ ದುಃಖವನ್ನು ದೂರ ಪಡಿಸುವದು ಅವರ ಮುಖ್ಯ ಕರ್ತವ್ಯ ಕರ್ಮವಾಗಿರುತ್ತದೆ. ಇತ್ತಲಾಗಿನ ಪದಂತಿ ಸಗಳನ್ನು, ಹಾಗೂ ಆ ಕಾನಡಾ ಅಧಿಕಾರಿಗಳ ಅಟ ಟೋಪವನ್ನು ಕೂಡಾ ಬಾಜೂಬಿಟ್ಟು ಕೇಳುವಾಗ ಸನಸನಾ ಅಲ್ಲಿಯ ಪ್ರಿಪ್ಪ ಪ್ರಜೆಗಳು ಕೂಡಾ ವಿಷ್ಣು ರಣ ಬೊಬ್ಬೆ ಇಡತಕ್ಕವರಿಂತಲೂ ಕಲೆಕ್ಟರ ವೀಜಿನ್ಸ ವಾಹ ಸತ್ಯ ಸೇನಕರಿಯಿಂತಲೂ ನಮ್ಮ ಮುಂಬಯಿ ಸರಕಾರದವರು ಯೋಚಿಸಿದ್ದಾರೋ? ಏನೆಂಬ ಸಂಶಯ ಬರುತ್ತದೆ. ನಮ್ಮ ವತ್ಸಲ್ಯೋಪಾನದ ಕಮಿಷನರ್ ಸಾಹೇಬರನ್ನು (ಮೊದಲಿಗೆ ವಿಷ್ಣು ಸಾಹೇಬರು

ಹ್ಯಾಗೆ ಅಲ್ಲಿಯ ರೆವಿನ್ಯೂ ಅಧಿಕಾರಿಗಳ ಮುದ್ದುಮರಿಯಾಗಿ ಕೆಲವು ಅನುಲುಗಳನ್ನು ಬಜಾಯಿಸಿದರೋ? ಅದರಂತೆ) ಕರ್ನಲ್ ಪೀಟಿಸ್ ಇವರ ಪರದಾಭಿಪ್ರಪಕತಮೂರ್ತಿಗಳಾಗಿ ಹೋಗಿದ್ದಾರೆ! ಕಾನಡಾ ಝಿಲ್ಲೆಯ ವಿಶಿಷ್ಟ ಡಿಪಾರ್ಟಮೆಂಟುಗಳೂ ಕೂಡಾ ಆ ಸಭೆಯ ವಿರುದ್ಧ ಪಕ್ಷವನ್ನು ಅನುಸರಿಸಿ ನಡೆಯುತ್ತಿದ್ದಾವೆ. ಈಗ ಕರ್ನಲ್ ಪೀಟಿಸ್ ಇವರು ಸರಕಾರಕ್ಕೆ ಮಾಡಿದ ರಿಪೋರ್ಟಿನಲ್ಲಿ ಶಿರಸಿಯ ಸಭೆಯವರು ಜನರಿಗೆ ಥುಲಥಾಪಿ ಕೊಟ್ಟು ಈ ರೀತಿ ಬೊಬ್ಬೆ ಎಬ್ಬಿಸಿದ್ದಾರೆಂತಲೂ, ಅಲ್ಲಿಯ ಜನರಿಗೆ ವನ ಸಂಬಂಧವಾದ ದುಃಖಗಳು ಇಲ್ಲವೆಂತಲೂ ಪಸ್ಟರೆ ಬರೆದು ತನ್ನ ಕಾರಕಿರ್ದಿಯ ಕೌಶಲ್ಯವನ್ನು ಎಷ್ಟರ ಮಟ್ಟಿಗೆ ವ್ಯಕ್ತಪಡಿಸಿದ್ದಾರೋ? ಅದರ ನಿಜತ್ವವು ಬಹುಬೇಗ ಫಾರೆಸ್ಟ ಕಮೀಶನವು ಕಾನಡಾ ಝಿಲ್ಲೆಗೆ ಬಂದರೆ ಸಹಜವೇ ತಿಳುವಳಿಕೆಗೆ ಬಂದೀತು. ಈಗ ಕ. ಪೀಟಿಸ್ ಇವರು ಕಾನಡಾ ಝಿಲ್ಲೆಯಲ್ಲಿ ಕಮೀಶನ್ ಕೂತರೆ ತಮ್ಮ ಗುಟ್ಟೆಲ್ಲ ಹೊರಬಿದ್ದೀತೆಂದು ಗ್ರಹಿಸಿಯೇ ಮುಂದಾಗಿ ಈ ಖಟಪಟಿಗೆ ಪ್ರಾರಂಭ ಮಾಡುತ್ತಿದ್ದಾರೆಂತ ಕಾಣುತ್ತದೆ. ಇವರು ನ್ಯಾಯ ಮೂರ್ತಿಗಳೇ ಆಗಿದ್ದರೆ ಕಾನಡಾ ಝಿಲ್ಲೆಗೆ ಕಮೀಶನ್ ಕೂಡ್ರುವದರಿಂದ ಯಾಕೆ ಭಯಪಡುತ್ತಿದ್ದರು? ಜಸ್ ಎಷ್ಟಾದರೂ ಕಾನಡಾ ಝಿಲ್ಲೆಯವರ ಸುದೈವದಿಂದ ಕಮೀಶನ್ ಕೂತು ಕೂತರೆ ಈಗ ಠಾಣೆ ಕುಲಾಬಾ ಝಿಲ್ಲೆಗಳಲ್ಲಿ ಎಷ್ಟು ಮಂದಿ ಫಾರೆಸ್ಟ ಕಾಮದಾರರಿಗೆ ಬರತರ್ಫ ಆಗಿ ಅವರಿಗೆ ಎಂದಿಗೂ ಸರಕಾರೀ ಅಧಿಕಾರ ಕೊಡಬಾರದೆಂದು ಗವರ್ನಮೆಂಟಿನವರು ಠರಾವ ಮಾಡಿದರೋ? ಅದಕ್ಕಿಂತಲೂ ದಡ್ಡ ಅಧಿಕಾರಿಗಳ ಬಗ್ಗೆ ಸಹಜವೇ ಮತ್ತೊಂದು ಠರಾವ ಮಾಡಬೇಕಾದೀತೆನ್ನುವದು ನಿಜವೇ! ಇದಕ್ಕೇನೂ ನಮ್ಮ ಸರಕಾರದವರು ಯೋಚನೆ ಹಿಡಿಯಕ್ಕಿಲ್ಲ. ಸನಯಾನುಸಾರ ನಮ್ಮ ಸರಕಾರವು ವಿಚಾರದಲ್ಲಿ ಬೀಳಬೇಕಾದೀತು. ಕ. ಪೀಟಿಸ್ ಸಾಹೇಬರಿಗೆ ಬೆವರನ್ನು ಒರಿಸುವದಕ್ಕೆ ನಿ ೧೦೦ ಶಿಪಾಯಿಯರು ಬೇಕಾದೀತು. ಅದರ ಮೂರ ನಿನೆ ಇಪ್ಪ ಶಿಪಾಯಿಯರೇ ಬೇಕೆಂದರೆ ಸ್ವತಃ ಸರ್ಕಾರ ಕೊಡತಕ್ಕದು ಬಿಟ್ಟೀತೇನೋ? ಇರಲಿ.

ಈಗ ನಮ್ಮ ಮುಂಬಯಿ ಸರಕಾರದವರು ಆ ಕಾನಡಾ ಝಿಲ್ಲೆಯ ಕಲೆಕ್ಟರ, ಅಸಿಸ್ಟಂಟ ಕಲೆಕ್ಟರ ಮೊದಲಾದ ಸ್ವತಂತ್ರ ಅಂಬೋಣದಂತೆಂತಲೂ ಬಿಟ್ಟು ಕ. ಪೀಟಿಸ್ ಇವರ ಅಭಿಪ್ರಾಯದ ಮೇಲೆಯೇ ನಿಲ್ಲಲಿಕ್ಕೆ ನಮಗೆ ಕಾರಣವಿಲ್ಲ. ಒಂದು ವೇಳೆ ಅವರ ರಿಪೋರ್ಟಿನ ಮೇಲೆ ಭರವಸೆಯಿಟ್ಟು ಕಾನಡಾ ಝಿಲ್ಲೆಗೆ ಕಮೀಶನ್ ನೇಮಿಸದೇ ಇದ್ದರೆ ಅಲ್ಲಿಯ ಜನರು ಇದೆಂಥ ದುರ್ಬಲರಾದ ಸರಕಾರವೆಂದು ಬೊಬ್ಬೆ ಇಟ್ಟಾರಲ್ಲವೋ? ಇಷ್ಟರ ಮಟ್ಟಿಗೇನೇ ಅಂದು ನುಣ್ಣನಿಸ್ಸಿಕೆ ಆ ಕಾಲದಂಥ ಸಮಾಧಾನ ಕಾಲವು ಬೇಕಾದವರೂ ಇದರ ಕಾರಣೆಂದು ಕಲ್ಪನ ವಿಚಾರಿಸ್ಸುವರು ಕಲ್ಪಿಸಿಕೊಂಡಾರೆನ್ನುವದರಲ್ಲಿ ಆಶ್ಚರ್ಯವೇನು?

ಈ ಶಾ. ವ. ಡು. ನಿ. ಸಭೆಯ ಶಿರಾಜೆ ಶಾಡವು ಇದಸ್ಸಾರ ಮಾಸ್ತರರಿಗೆ ಸ್ವಲ್ಪ ಸಿಕ್ಕಿದಾಸ್ನ್ಯಾ ಅವರ ಬಗ್ಗೆ ಪ್ರಶ್ನೆಯಿಂದ ಪತ್ರೆವಾನ ಪತ್ರಿಕೆಕೆಲ್ಲ "ಹೊಂಬಟ ಛಿ" ಎಂಬ ಮಂತ್ರ ಜಪ ಮಾಡಿದ ಕಾರಣ ಅವರನ್ನು ಹೊಲಿಗಿದ್ದದ್ದರಿಂದ ಅದಕ್ಕೆ ಕಾರಣಕ್ಕೆ ವಿಶೇಯೂ ಬೇರೆ ಉಪಾಯವಿರಲಿಲ್ಲ. ಆದರ ಕಳಿತೆ ಅಲ್ಲಿಯ ಆ. ನೂಮಹೇಶರಾನ್ನಾಡ ಇ. ಗಾ. ಸಾಹೇಬರ ಇವರು ಕಿತ್ತು ಅವರ ಮೇಲೆ ಸಂಚಾರವಾಗಿ ಪರಸ್ಪರಾಟ ಯಲ್ಲಿರತ್ತವೆ. ಈಗ ಯಾರಾದರೂ ಎಷ್ಟರ ಮಟ್ಟಿಗೆ ಬೊಬ್ಬೆ ಇಟ್ಟರು? ಪತ್ರದಲ್ಲಿ ಒಂದು ಅನ್ಯಾಯ ಕ-ತಕೆ ಅವರಮೇಲೆ ಯಾರಾದರೂ ಟೀಕೆಮಾಡ್ದಾರು! ಪತ್ರಕ್ಕೆ ಹತ್ತು ಅನ್ಯಾಯವಾದ ಮೇಲೆ ಟೀಕೆಗಾದರೂ ಜಾಗವಿಲ್ಲ? ನ್ಯಾಯಗಳೆಲ್ಲ ಬೇಜಾರುಪಟ್ಟರು! ವರ್ತಮಾನ ಪತ್ರಕರ್ತರೆಲ್ಲ ಥಣ್ಣಗೆ ಹೋದರು! ವಿಚಾರಿಗಳೆಲ್ಲ ದುಃಖವಾದವು. ಸರಕಾರಕ್ಕೆ ಬೇಜಾರ ಬಂತು! ಸಜನರು ಸೋತರು! ಪ್ರಜೆಗಳು ದಿಕ್ಕಿಲ್ಲೆಂದು ಅಳತ್ತ ಇದರು! ಇಷ್ಟಾದರೂ ಕ. ಪಿಟಿಸ್ ಇವರು ಸಬಿಬರದೊಡನೆ ಹುರುಪಾಗಿ ನಿಂತಿದ್ದಾರೆ! ನಮ್ಮ ಗವರ್ನಮೆಂಟಿನವರು ಆ ಕಾನಡಾ ನಿವಾಸಿಗಳ ಹಲುಬುವಿಕೆಯ ಕಡೆಗೆ ಲಕ್ಷಕೊಡದೇ ಕ. ಪೀಟಿಸ್ ಇವರ ಅಭಿಪ್ರಾಯದ ಮೇಲೆಯೇ ವಿಶ್ವಾಸವಿಟ್ಟು ಅವಿಚಾರತೆಯನ್ನು ವಹಿಸಿ ಕಮೀಶನ್ ನೇಮಿಸದೇ ಇದ್ದರೆ ಕಾನಡಾ ಝಿಲ್ಲೆಯೇ ೧ನೇ ಬ್ರಹ್ಮ ದೇಶವಾದೀತೇನೋ ಏನೋ? ಇದೊಂದು ಸಂಶಯವು ಬಲವತ್ತರವಾಗಿ ನನಗೆ ಬಾಧಿಸುತ್ತದೆ, ಇರಲಿ. ಅಂಥ ಕಾಲ ಬಂದರೆ ಕ. ಪೀಟಿಸ್ ಇವರು ಮಿ. ಮೆಕ್‌ಫರಸನ್ ಇವರ ಮಿತ್ರತ್ವವನ್ನು ಘ್ಯಾಸದೇ ಇರರೆಂದು ಆಶಿಸುತ್ತೇನೆ. ಪತ್ರ ವಿಸ್ತಾರವಾಯಿತು ಇನ್ನೊಮ್ಮೆ ಬರುವೆನು.

ಒಬ್ಬ ಖಂಡಿತವಾದಿ.

ಆರ್. ಡಿ. ಕಾನಿಟಕರ ಕಂಪನಿ. ಜವಿಲರ್ಸ್ ಏಜಂಟ್ಸ ಗಿರಗಾಂವ. ಮುಂಬಯಿ.



ಸ್ವಿಜ್ಜರ್ಲ್ಯಾಂಡ ಕರಿಸಿದ — ಪೇಟೆಗೆ ಸೇರಿದ ವೆಸ್ಟ ಎಂಡ ಕಂಪನಿ ಪ್ರತೀ ವಾಚುಗಳನ್ನು ತರಿಸಿದ್ದಾರೆ. ಈ ಗಡಿಯಾರಗಳ ನಮೂನೆಗಳು ಕೆಳಗೆ ಬರೆದ ದರದಿಂದ ಪ್ರತಿಯೊಂದು ಗಡಿಯಾರದ ಮೂಲಕ ಗ್ಯಾರಂಟಿ ಇದ್ದು ಕಳಿಸಲಾಗುವದು.

		ರೂ	ಆ.
1	ವೆಸ್ಟ ಎಂಡ ಕಂ ಓಪನ್‌ಫೇಸ— ಕ್ಯಾಪಿನ ಫ್ಯಾಶನ್	11	8
2	ಡಿ ಹಂಟಿಂಗಕೇಸ	11	0
3	ಡಿ. ಸ್ವೆಂಟಿ ನಾಯಿಜ್—ಕ್ಯಾಪಿನ ಸಿಟಿಂಗ್ ಬ್ಯಾಲೆನ್ಸ	11	0
4	ಡಿ. ಬೆಳ್ಳಿಕೇಸ— 1 ನಂಬರ	23	0
	2 ನಂಬರ	23	0
5	ರಾಸ್‌ಕೋಫ—ಪೇಟಂಟ ರೂ.	15	0
	ಡಿ. ಅಸ್ಸಲ	11	0
6	ಹೊಸ ಪ್ಯಾಟರ್ನ—ರಾಸ್‌ಕೋಫ	16	0
	ಡಿ. ಟೀಡು	13	0
7	ಜ್ಯಾನ್ ಬ್ಯಾರಲ—ಕುರಾಯಿ ಬೆಳ್ಳಿಯದು	18	0

DR. WAMANGOPAL'S MEDICINES

ಹಲ್ಲುಗಳನ್ನು ಘಟ್ಟಿ ಮಾಡುವ ಸುಗಂಧಕಾರಕ ದಂತ ಶಾಣವು.

ಈ ಉತ್ತಮ ಗುಣಕಾರಿಯಾದ ಹಿಟ್ಟು ಸದಾ ಬಳಕೆಯಲ್ಲಿಟ್ಟದ್ದರಿಂದ ಎಲ್ಲ ತರದ ದಂತ ರೋಗಗಳು ನಾಶವಾಗುತ್ತವೆ. ಹಲ್ಲುಗಳಿಂದ ರಕ್ತ ಸೋರುವದು, ಶರೀರಗಳು ಬೀಸುವದು, ಹಲ್ಲುಗಳ ಕಳಕು ಮುಂತಾದ ವಿಕಾರಗಳು ಇದರಿಂದ ನಾಶವಾಗುತ್ತವೆ ಕ್ರಯ ೧ ಅಣೆ. ೧೭ಕ್ಕೆ ರೂ. 3. ಕಟ್ಟುವ ಖರ್ಚು ಆಣೆ.

ಪಾಚಕ ಕ್ಷುಧಾವರ್ಧಕ ಗುಳಿಗೆಗಳು.

ಈ ಗುಳಿಗೆಗಳಿಂದ ಅನ್ನ ಪಚನವಾಗಿ ಹೊಟ್ಟೆಯು ನಿರ್ಮಲವಾಗುತ್ತದೆ. ಬೈಲಕಡೆ ಚನ್ನಾಗಿ ಆಗುತ್ತದೆ. ಹೊಟ್ಟೆಯೊಳಗೆ ವಾಯು ಉತ್ಪನ್ನ ವಾಗುವದಿಲ್ಲ. ಮತ್ತು ಹಸಿವೆಯು ಉತ್ತಮವಾಗಿ ಉಂಟಾಗುತ್ತದೆ. ಈ ಗುಳಿಗೆಗಳು ಅನ್ನ ಪಚನವನ್ನು ಉತ್ತಮವಾಗಿ ಮಾಡುವದಲ್ಲದೆ ಶಕ್ತಿವರ್ಧಕವೂ ಆಗಿರುತ್ತವೆ ಕ್ರಯ ಆಣೆ ೬. ೧೭ಕ್ಕೆ ರೂ. 3. ಆಣೆ ೧ ಕಟ್ಟುವ ಖರ್ಚು ಆಣೆ

ಅನುಭವಿಕ ಪೌಷ್ಟಿಕ ಮತ್ತು ಕಾಮೋದ್ದೀಪಕ ಮಕರಧ್ವಜ ರಸದ ಗುಳಿಗೆಗಳು.

ಈ ಗುಳಿಗೆಗಳಿಂದ ಯಾರಿಗೆ ಧಾತುವು ತೆಳುವಾಗಿ ಮೂತ್ರದೊಡನೆ ಅಥವಾ ಸ್ವಪ್ನಾವಸ್ಥೆಯಿಂದ ಹೋಗುತ್ತದೆ; ಧಾತು ಹೊದ್ದರಿಂದ, ಅತಿಸ್ತ್ರೀ ಸಂಗದಿಂದ ಅಥವಾ ಬಲತ್ಕಾರದಿಂದ ವೀರ್ಯಪಾತ ಮಾಡಿದ್ದರಿಂದ ಯಾರ ಇಂದ್ರಿಯಗಳು ಶಿಥಿಲವಾಗಿವೆಯೋ ಶಕ್ತಿ ಚೇತನ ಅಸುಖಪಟ್ಟಿದ್ದಾರೋ ವೀರ್ಯ ನಷ್ಟವಾಗಿ ತ್ಯಜ್ಯೋ, ಮತ್ತು ಇಂಥ ಯಾವದೊಂದು ರೋಗದಿಂದ ಶಕ್ತಿ ಕ್ಷೀಣವಾಗುತ್ತಾ ಹೋಗಿ, ಅಸ್ಥಿ ಕೀಲುಗಳು ಬೆನ್ನು ನೋವು ಮುಂತಾದ ರೋಗಗಳ ವಿಕಾರ ಯಾರಿಗೆ ಉಂಟಾಗುತ್ತವೋ, ಅವರು ಈ ಗುಳಿಗೆಗಳನ್ನು ಸೇವಿಸಿದ್ದರಿಂದ ಗುಣವಾಗುವದು ಮಾತ್ರವಲ್ಲದೆ ವೀರ್ಯ ಘಟ್ಟಿಯಾಗಿ ಪುನಃ ಪ್ರಕೃತಿಯು ಪೂರ್ವವತ್ ಆಗುತ್ತದೆ. ವಿಶೇಷ ಪಥ್ಯವಿಲ್ಲ. ಈ ಔಷಧದ ಸಂಗಡ ಚಿಕ್ಕ ಒಂದು ಪುಸ್ತಿಕೆಯಲ್ಲಿ ೪ ಗುಳಿಗೆಗಳು. ಕ್ರಯ ೧ ಬಾಟ್ಲಿಗೆ ೧೪ ಆಣೆ. ೧ ಕ್ಕೆ ರೂಪಾಯಿ ೯. ಮತ್ತು ಟಪಾಲು ಖರ್ಚು ೧ ರಿಂದ ೪ ರ ವರೆಗೆ ೪ ಆಣೆ.

ಡಾಕ್ತರ ವಾಮನ ಗೋಪಾಳ ಇವರ ಸೌಷಧಾಲಯ.

ಇದು ವಿಶೇಯವಿ ನೂರ್ವರಿಗಳಂತೆ ಅನೇಕ ರೋಗಗಳನ್ನು ಪರಿಹರಿಸುವದಲ್ಲದೆ ಕೆಳಗೆ ಬರೆದ ರೋಗಗಳ ಮೇಲೆ ವಿಶೇಷ ಗುಣಕಾರಿಯಾಗಿದೆ.— ಉಪದಂಶ ಜನ್ಯವಿಕಾರ, ನರವು ಮತ್ತು ತಜ್ಜನ್ಯ ಭಯಂಕರ ರೋಗ ಸಂಧಿವಾತ, ಗಂಡಮಾಲೆ, ಪ್ರಮೇಹ(ಗರಮಿ) ಮತ್ತು ಅದರಿಂದುಂಟಾಗುವ ಪಕ್ಷಘಾತಾದಿರೋಗ, ರಕ್ತ ಕೆಟ್ಟದ್ದರಿಂದ ಅಂಗಾಲ ಅಂಗೈಗಳ ಮೇಲೆ ಬೀಳುವ ಕಪ್ಪು ಕ್ಷತಗಳು, ಬೀಸು ಮತ್ತು ನೋವು ಅಂಗಾಲು ಅಂಗೈಗಳ ಉರಿಯು, ಅನೇಕ ತ್ವಚೆಯ ಕಿಡೀಗಳು, ಹಾಗೆಯೇ ರಕ್ತ ಶುದ್ಧಿ ಇಲ್ಲದಿರುವದು, ಧಾತುಕ್ಷೀಣತೆ ಉರಿಯ ಇತ್ಯಾದಿಗಳ ಮೇಲೆ ಬಹಳ ಉತ್ತಮ ಗುಣ ಬರುತ್ತದೆ. ಈ ಔಷಧ ತೆಗೆದು ಕೊಂಡರೆ ಇಂಥಾ ಪಥ್ಯದ ಅವಶ್ಯವಿಲ್ಲ. ಅನೇಕರು ವೈದ್ಯರ ಮುಂತಾದವರು ತೆಗೆದು ಕೊಳ್ಳುತ್ತಾರೆ, ಮತ್ತು ಅದರಿಂದ ಅನೇಕವ್ಯಾಧಿಗಳು ಉತ್ಪನ್ನವಾಗುತ್ತವೆ ಅವು ಇದರಿಂದ ನಾಶವಾಗುತ್ತವೆ. ಒಂದು ಬಾಟ್ಲಿಯ ದರ ೧ ರೂಪಾಯಿ ೪ ಆಣೆ. ಟಪಾಲ ಖರ್ಚು ೪ ಆಣೆ. ಸಟ್ಟಿಗಳ ಖರ್ಚು ೬ ಆಣೆ.

ಅದ್ಭುತ ಚಮತ್ಕಾರ.

ಬಿಳಿಕೂದಲು ಕರಿದಾಗುವ "ಕಾಪ್ಸು".

ಒಂದೇಸರ್ತಿ ಹಚ್ಚಿ ಚಮತ್ಕಾರ ನೋಡಿರಿ! ಇದರಿಂದ ಬಿಳಿಕೂದಲು ಕೇವಲ ಕಪ್ಪಾಗುತ್ತದೆ. ಮತ್ತು ಅವಕ್ಕೆ ಬಲ ಬರುತ್ತದೆ. ತಿಂಗಳಲ್ಲಿ ಎರಡಾವರ್ತಿ ಈ ಕಪ್ಪು ಹಚ್ಚಿದರೆ ಕೂದಲಿನ ಬಣ್ಣವು ಎಂದೂ ಹೋಗದು. ಕಲವು ಕಮ್ಮಗಳನ್ನು ಎಂಟೆಂಟು ದಿನಗಳಿಗೊಮ್ಮೆ ಹಚ್ಚಿ ಕೊಳ್ಳ ಬೇಕಾಗುತ್ತದೆ. ಆದರೆ ಇದನ್ನು ಪಕ್ಷಕ್ಕೆ ಒಮ್ಮೆ ಹಚ್ಚಿ ಕೊಂಡರೆ ಸಾಕು. ಇದೊಂದು ಕುಪ್ಪಿಯು ಕರಿಕಂಗಳಷ್ಟು. ಕ್ರಯ ೧ ರೂಪಾಯಿ, ಬಂಗಿ ಖರ್ಚು ೪ ಆ. ಈ ಎಲ್ಲ ಔಷಧಗಳು ಕರ್ನಾಟಕ ಭಾಷೆಯಲ್ಲಿಯೂ ಪತ್ರ ಸ್ತಕ ಆಫೀಸಿನಲ್ಲಿಯೂ ನಮ್ಮ ಕಚೇರಿಯಲ್ಲಿಯೂ ಸಿಕ್ಕುತ್ತವೆ.

ಗೌತಮ ರಾವ ಕೇಶವ.

उपदेशसाहस्री.

ಮಾರಾಟಕ್ಕೆ ಸಿದ್ಧವಾಗಿದೆ.

ಶ್ರೀ ಶಂಕರಾಚಾರ್ಯ ವಿರಚಿತ ಉಪದೇಶ ಸಾಹಸ್ರೀ

ರಾಮ ತೀರ್ಥಸ್ವಾಮಿ ಕೃತ ಟೀಕಾ ಸಮೇತಾ.

ಕಿಮ್ಮತ್ತು ರೂಪಾಯಿ 3.

ಸುಭಾಷಿತ ರತ್ನಭಾಂಡಾಗಾರವು ೧||

ಬ್ರಹ್ಮಕರ್ಮ ಆಶ್ವಲಾಯನ (ಋಗ್ವೇದಿ.) ||

ಈ ಪುಸ್ತಕದ ಹೊರ್ತು ಮುಂತಿನ ಜಾತಿ ರಾತಿನಂತೆ ಅನೇಕ ಪುಸ್ತಕಗಳು ನಮ್ಮ ಕಡೆಗೆ ಸಿಕ್ಕುತ್ತವೆ.

ಜನಾರ್ದನ ಮಹಾದೇವ ಗುರ್ಜರ

ಬುಕ್‌ಸೆಲ್ಲರ ಮತ್ತು ಪಬ್ಲಿಶರ

ರಾಮವಾಡಿ—ಮುಂಬಯಿ.

ಮಾಡಾ ಲಕ್ಷ್ಯ ಕೊಡಿರಿ

ಕಣ್ಣಿಗೆ ಬಹಳ ತಂಪು ಕೊಡುವ ಶಿಲೆಯ (ಪೆಬಲ್ಸ್) ಕನ್ನಡಕಗಳು

ಕಾಶೀಸನ್ನು ಕನ್ನಡಿಯವು ನಮ್ಮ ಕಡೆಗೆ ಸಿಕ್ಕುವದಿಲ್ಲ ಫಕ್ತ ಜೋಡು (೩-೮) ಮೂರು ರೂಪಾಯಿ ಎಂಟಾಣೆ ಕೆಳಗಿನದೇ ಇಲ್ಲ.

ಈ ಕನ್ನಡಕವನ್ನು ತನ್ನ ತನ್ನ ನೇತ್ರ ರಕ್ಷಣಾರ್ಥವಾಗಿ ಪ್ರತಿಯೊಬ್ಬನೂ ಧಾರಣ ಮಾಡುವದಕ್ಕೆ ಅಪೇಕ್ಷೆಯುಳ್ಳವರಿದ್ದರೆ ತಮ್ಮ ವಯಸ್ಸು ಮತ್ತು ಕಣ್ಣಿನ ದೃಷ್ಟಿಯ ದೋಷ ಏನೆಂಬುದನ್ನು ಬರೆದರೆ ದೂರದೃಷ್ಟಿ ಸಮೀಪದೃಷ್ಟಿ ಯಾವಾಗ ಎಂದೆಂದು ಬರಬೇಕು. ಕಣ್ಣಿನ ಪರೀಕ್ಷೆಯನ್ನು ಪುಕಟೆಯಾಗಿ ಮಾಡಿಕೊಡಲಾಗುವದು. ತಾವು ಡಾಕ್ಟರ ಭಾಲಚಂದ್ರ ಇವರು ಕೃಪಾ ಇಟ್ಟು ಈ ಶಕ್ತಿ ಪರೀಕ್ಷೆಯಿಂದ ನಮಗೆ ಸಹಾಯ ಮಾಡುತ್ತಾರಾದ ಕಾರಣ ನಮಗೆ ಯಾವ ವಿಷಯವನ್ನು ತಿಳಿಸುತ್ತಾರೋ ಅದನ್ನು ಅನುಸರಿಸಿ ಅವಕ್ಕೆ ತಕ್ಕಂತ ಚಷ್ಮಾಗಳನ್ನು ಮುತ್ತು ಮಾಡಿಸಿ ಕಳುಹಿಸಿ ಕೊಡುವೆವು ಈ ಜಿನ್ನಸು ವೇಪೇಬಲಿನಿಂದ ಕಡಿಗೆ ತರಿಸಿಕೊಂಡರೂ ನಮಗೆ ಬರಕೊಂಡಂತೆ ನರಿ ಎಂದು ಎಣಿಸುವೆವು. ಇಲ್ಲವಾದರೆ ಈ ಕೆಳಗಿನ ವಿಳಾಸಕ್ಕೆ ಬರುವು ಬಹುದು. ಎಷ್ಟು ಕಿಮ್ಮತ್ತಿನಲ್ಲಿ ಆಗ ಬೇಕೆಂದಪೇಕ್ಷಿಸುತ್ತಾರೋ ಆ ಶಕ್ತ ಹಣ ಸಹಿತವಾಗಿ ರವಾನಿಸ ಬೇಕು ಇಲ್ಲವಾದರೆ ವ್ಹಿ. ಪೀ. ಪೋಸ್ಟ ದ್ವಾರ ರವಾನಿಸುವೆವು.

ಖರೆ, ಮತ್ತು ಕಂಪನಿ ನುಗಭಾಟ ಆಪ್ಟಿಶಿಯನ್ಸ್ ಜ್ಯಾಳೆ ಮುಂಬಯಿ.

ಸಮಲೋಕಿ ಕನ್ನಡ ಟೀಕೆಯು.

ಶ್ರೀಮದಧ್ಯಾತ್ಮ ರಾಮಾಯಣವು.

ಈ ಮೇಲಿನ ಪರಮ ವೇದಾಂತ ಮಯವಾದ ಶ್ರೀ ರಾಮ ಚರಿತ್ರವು ಸಂಸ್ಕೃತ ಭಾಷೆಯಿಂದ ಇರುವ ಕಾರಣದಿಂದಲೂ ಸದರಿ ಸಂಸ್ಕೃತ ಭಾಷೆಯು ಇತ್ತಲಾಗಿ ನಮ್ಮ ದೇಶದೊಳಗೆ ಅಗದೀ ಹೀನ ಸ್ಥಿತಿಯನ್ನು ಪಡದ ಕಾರಣ ಅನೇಕರಿಗೆ ಆ ಅನವದ್ಯಾಮೃತ ಪಾನವು ದುರ್ಲಭವಾಗಿರುವದರಿಂದ ಇಂಥ ಸುರಸವಾದ ಅಧ್ಯಾತ್ಮ ವಿಷಯವು ಸಂಸ್ಕೃತ ಜಾಣೆಯನ್ನು ತಿಳಿಯದ ನಮ್ಮ ಕನ್ನಡಿಗರಿಗೆ ಅದರ, ಸ್ವಾರಸ್ಯವು ತಿಳಿಯುವಂತೆ ಮಾಡಬೇಕು ಎಂಬದರಿಂದಲೂ ಕೂಡಾ ನಾವು ಇದನ್ನು (ಸದರಿ ಅಧ್ಯಾತ್ಮ ರಾಮಾಯಣವೆಂಬ ಗ್ರಂಥವನ್ನು) ಪ್ರತಿ ಪದಕ್ಕೆ ಕನ್ನಡ ಟೀಕೆಯುಳ್ಳದ್ದಾಗಿ ರಚಿಸಿ ಛಾಪಿಸುತ್ತೇವೆ. ಇದಕ್ಕೆ ಈಗಿನಿಂದ ೫|| ರೂಪಾಯಿ ಕಿಮ್ಮತ್ತು ಇಟ್ಟಿರುತ್ತದೆ. ಹಣ ಫರಕ ಮಾಡಿದವರಿಗೆ ತಯಾರಾದಷ್ಟನ್ನು ಬೇಕಾದರೂ ಕಳಹಿಸ ಬಹುದು, ಇಲ್ಲವಾದರೆ ತಯಾರಾದ ಮೇಲೆ ಕಳುಹಿಸುವೆವು. ಕೆಲಸವು ಭರದಿಂದ ಸಮಾಧಾನದಿಂದ ನಡೆಯುತ್ತದೆ. ಹಿಂದಿನಿಂದ ಹೆಸರು ಕೊಟ್ಟ ಬಿದ್ದೀತು. ಬೇಕಾದವರು ಈ ಕೆಳಗೆ ಸಹಿ ಮಾಡಿದವರ ವಿಳಾಸಕ್ಕೆ ಅಥವಾ ಕರ್ನಾಟಕಕ್ಕೂ ಆಫೀಸಿಗೆ ಕಳಿಸಿದರೆ ಹಣ ಸಹಿತ ಬರಕೊಂಡಲ್ಲಿ ಅನುಕೂಲ ಪುಸ್ತಕವು ರವಾನಿಸಲ್ಪಡುವದು.

ಆನಲೆ ಪುಟ್ಟಪ್ಪಾ.

ತಾ. ಸಾಗರ, ಡಿ. ಶಿವಮೊಗ್ಗ

ಸಖಾರಾಮ ಮಾಧವರಾವ ಟಿಳಕ ಮತ್ತು ಕಂಪನಿ. ಕಾಳಕಾದೇವಿ ರೋಡ್ ಮನೆ ನಂಬರ್ ೫೦.



ನಿನ್ನೆ ದಿವಸದ ಪೇಟೆ ಧಾರಣೆ.

(ನಿಜವಾಗಿ ಕೇಳಿ ಬಂದದ್ದು.) ನಿಶ್ಚಯ

ಯಾಲಕ್ಕಿ ಹೊಸ ಮಾಲು ಬರಲಿಕ್ಕೆ ಪ್ರಾರಂಭವಾಯಿತು. ಇಲ್ಲಿ ಇನ್ನೂ ಮಾರಾಟವಿಲ್ಲ. ಹಾವೇರಿಯಲ್ಲಿ ಮಾತ್ರ ಹೊಸ ಯಾಲಕ್ಕಿ ಅಲ್ಪ ಮಣ ೧ಕ್ಕೆ ೪೦–೪೦ ರೂಪಾಯಿಯಲ್ಲಿ ವಿಕ್ರಯವಾಯಿತು.

ವಿಸ್ತಾರವಾಯಿತೀ ರಾತಿ ೪೦ ಖಂಡಿ		
ಚಿಕ್ಕನಿ		೫೦–೦
ಘಟ್ಟದ ರಾತಿ		೫೦—೬೦
ಸಬ್ಬಾತ ಪೆಟ್ಟಿಗೆ ೧೦ ಹೇರು ಮಾತ್ರ		
ಅಡಿಕೆ.		
ಚಾಲಿ ಖಂಡಿ ೧ ಕ್ಕೆ ೧೧೦–೧೬೦		
ಚಿಕಣಿ	,,	೯೦–೧೦೦ ಮಂದಿ
ಪಾಡಿ	,,	೩೦
ಬೆಟ್ಟೆ	,,	೮೦–೯೦ ಮಂದಿ
ಬಂಗಾರ ಹಸಿ ತೊಲೆ ೧ ಕ್ಕೆ	,,	೨೨–೬–೦
ನಂಬರ ೧೦೦ ಛಟ್ಟೆ	,,	೨೨–೧೧–೬
ಹಳೇ ಬೆಳ್ಳಿ ತೊಲೆ ೧ ಕ್ಕೆ	,,	೦೩–೧೫–೦
ಹೊಸ ಬೆಳ್ಳಿ ೧ ಕ್ಕೆ	,,	೦೩–೧೪–೦
ತಾಂಬ್ರ ತಂಪೆಪಟ್ಟಿ	,,	೫೦||
ಹಿತ್ತಾಳೆ		೫೫–೬೮
ಬಾಳುಮೆಣಸು	,,	೦೨೦–೦೫ ತೇಜಿ ಇಲ್ಲ.

ಯಾಲಕ್ಕಿ ಇಂಥ ವೊತರಮ್ಮನಲ್ಲಿ ನಡೆ ಬಹಳ ಮಂದಿ ಅವೆ.

ಅಡಿಕೆ ದರವೂ ಕಡಿಮೆ ಆಗುವ ಹಾಗೆ ಉಂಟು.

ಬಂಗಾರ ತೇಜಿ, ಆದರೂ ಸ್ವಲ್ಪ ದರ ಇಳಿದಿದೆ. ಬೆಳ್ಳಿ

ಸೂಚನೆ ಈ ಪತ್ರವು ಕರಕಿ ಬೂ. ಮಾ. ಭಟ್ಟರು ಮೊಹಾಪ್ರಾಯಟರ ಹ. ಸು. ಇವರಿಗೋಸ್ಕರ ಸುಂಕೇರಿ ರಾಂಶಪ್ಪಾ ನಾಗಕರ್ತೀ ಇವರ ಮುಂಬಯಿ ಕರ್ನಾಟಕ ಛಾಪಖಾನೆಯಲ್ಲಿ ಛಾಪಿಸಲ್ಪಟ್ಟಿತು.

ಹವ್ಯಕ ಸುಬೋಧ.

HAVYAK ASUBODH

AND KARWAR CHANDRIKE.

ಪ್ರತಿ ಮಂಗಳವಾರ ಪ್ರಸಿದ್ಧವಾಗುತ್ತದೆ.

VOL IV. BOMBAY TUESDAY 15 OCTOBER 1889 NO 48

ಮುಂಬಯಿ ಮಂಗಳವಾರ ತಾರೀಖು ... ನೇ ಅಕ್ಟೋಬರ ೧೮೮೯ ... ಅಂಕ ೪೮

ಹವ್ಯಕ ಸುಬೋಧದ ಚಂದಾಯದ ವಿವರ

ವರುಷ ಒಕ್ಕೆ ಮುಂಗಡ ಒಂದು ತಿಂಗಳದ ಒಳಗೆ ಹಣ ಮುಟ್ಟಿಸುವವರಿಗೆ ... ೩-೮-೦

ಸದರಿ ಹಿಂದಿನಿಂದ

ಆರು ತಿಂಗಳಿಗೆ ... ೨-೦-೦

ಮೂರು ತಿಂಗಳಿಗೆ ... ೧-೦೪-೦

ಬಿಡಿ ಸಂಚಿಕೆ ೧ಕ್ಕೆ ... ೦-೧-೬

ಚಂದಾದಾರರಲ್ಲದವರಿಗೆ ಅಂಚೆ ವೆಚ್ಚ ಪ್ರತ್ಯೇಕ ...

ADVERTISEMENT RATES.

For the first insertion per line 0 2 0

For the second and subsequent insertions 0 1 0

For advertisements ... per line ...

(Contracts ... for long periods ... on advantageous.)

ನೋಟೀಸು ಜಾಹೀರು ಮಾಡುವ ದರ

ಮೊದಲಿನ ಸಾರೆ ೧ ಪಂಕ್ತಿಗೆ ... ೦-೨-೦

ಎರಡನೇ ಸಾರೆ ಪ್ರತಿ ಪಂಕ್ತಿಗೆ ... ೦-೧-೦

... ಪ್ರತಿ ಪಂಕ್ತಿಗೆ ೦-೧-೦

ಸಂದರ್ಭ ನೋಟೀಸು ಬಹಳ ಕಾಲದ ವರೆಗೆ ಹಾಕಬೇಕಾದವರು ಸಂಪಾದಕರನ್ನು ಕೇಳಿಕೊಳ್ಳಬೇಕು.

ಪುಸ್ತಕಗಳು!!!

	ರೂ	ಆ	ಪೈ
ಸಟೀಕ ಅಧ್ಯಾತ್ಮರಾಮಾಯಣ	೨	೦	೦
ಶಂಕರ ಸಂಹಿತೆ		೨	೦
ಮನುಸ್ಮೃತಿ ಸಟೀಕ		೨	೦
ರಂಭಾಶುಕ ಸಂವಾದ		೦	೦
ಕಾರ್ತವೀರ್ಯನ ಕಥೆ		೫	೦
ಕೃಷ್ಣಸಂಧಾನ		೦	೦
ಹವ್ಯಕರ ಉತ್ಪತ್ತಿ ಇತಿಹಾಸ		೨	೦
...		೯	೦
...		೫	೦
...		೮	೦
...		೦	೦
...		೫	೦
...		೦	೦
...		೦	೦
...		೦	೦
...		೦	೦
...		೦	೦
...		೦	೦
...		೦	೦
...		೦	೦
...		೦	೦
...		೦	೦
...		೦	೦
...		೦	೦

ಬಾಲಬೋಧ.

ಸಟೀಕ ಅಧ್ಯಾತ್ಮರಾಮಾಯಣ	೨	೦	೦
ಸೋಕಂಠ ಪುರಾಣ	೨	೦	೦
ವಾ. ಸುಂದರಕಾಂಡ (ರಾಜ್ಞಿ)	೧	೦	೦
ಗಾಯತ್ರೀ ಪಂಜರಗಳು	೦	೪	೦
ಸತ್ಯಗಣಪತಿ ವ್ರತಕಥ	೦	೪	೦
ವಿಷ್ಣು ಸಹಸ್ರನಾಮ	೦	೨	೦
ಅಮರಕೋಶ ಮೂಲ	೦	೮	೦
ಸರ್ಪ ಸಂಸ್ಕಾರ	೦	೪	೦
ಗೀತೆ (ಪಿಂಡ (ಸಂಸ್ಕೃತ)	೦	೪	೦
ಶಿವಗೀತೆ (ಮರಾಠಿ)	೦	೭	೦
ಅವಧೂತಗೀತೆ ,,	೦	೪	೦
ಗುರು ಚರಿತ್ರೆ ,,	೦	೦	೦
ಉಪದೇಶಶತಕ ,,	೦	೦	೦
ಸಟೀಕ ಈಶಾನ ಪ್ರಸ್ತಿ	೦	೦	೦

☞ ಈ ಮೇಲಿನ ಪುಸ್ತಕಗಳು ಯಾರಿಗಾದರೂ ಬೇಕಾಗಿದ್ದರೆ ಅಂಥವರು, ನಗದು ಹಣ ಕೂಡಿಸಿ ಬರೆದರೆ ಕೂಡಲೆ ವ್ಹೀ. ಪೀ. ಪೋಸ್ಟ ದ್ವಾರಾ ಕಳಿಸಲಾಗುವದು. ಪುಸ್ತಕಗಳ ಟಪಾಲು ಹಾಸಲು ಪ್ರತ್ಯೇಕ ಕೊಡಬೇಕು.

ಕೆ. ವೆಂಕಟರಮಣ ಶಾಸ್ತ್ರೀ ಸೂರಿ, ವ್ಹಾಕ ಪ ಸ ಮತ್ತು ಭಾರತೀಪ್ರೆಸ್ ಮುಂಬಯಿ.

	रु०	आ०
महाभारत सटीक (गणपत कृष्णाजी)	४०—	०
वाल्मीकि रामायण सटीक	१२—	०
श्रीमद्विष्णुपुराण सटीक	४—	०
सुभाषित रत्नाकर	२—	०
विष्णुसहस्रनाम शंकराचार्यभाष्यामारिते	—	८
श्रीनिवासचम्पू टिप्पणीसमेत	१—	४
भागवतचम्पू ,,	१—	८
नृसिंहपुराण ,,	१—	८
माघमासमहात्म्य	०—	१०
सुंदरकांड, (वाल्मीकि रामायण)	१—	८
आत्मपुराण सटीक	२०—	०
श्रीमद्भागवत श्रीधरीटीका	१२—	०
हरिवंश सटीक	६—	०
श्रीमद्भागवत विजयध्वजी टीका	१०	०
आनन्दरामायण	३—	०
शारीरक (शंकरभाष्य) रत्नप्रभाटीका	१०	०
वामन पुराण	६—	०
देवी भागवत सटीक	७—	०
साम्बपुराण	२—	०
अध्यात्मरामायण सटीक	२—	०
ऋग्वेदी ब्रह्मकर्म	३—	८
हिरण्यकेशी ,,	४—	०
ऋग्वेदी संहिता (कापडी बांधलेलें	४—	८
यजुर्वेद (तैत्तिरीय) संहिता	९	
स्तोत्ररत्नाकर	१	०
महाशिवपुराण सटीक	१—	०
गरुडपुराण ,,	१—	०
सिद्धान्तकौमुदी	३—	०
रामाश्वमेध	१—	८
व्रतराज समेत टिप्पणी	५—	०
पञ्चदशी सटीक	३—	०
हनुमन्नाटक	१—	०
श्रीमल्लेश महात्म्य	५	०
भोजचम्पू	१—	०
हयग्रीवस्य कवि रहस्य	०—	८
भार्गवचम्पू टिप्पणी समेत	०—	८
फाल्गुनमास महात्म्य	०—	८
रामायण ,,	०—	८
रघुनाथविजयचम्पू	०	८
सुन्दरलहरी टिप्पणी समे।	०—	४
रसतरंगिणी ,,	०—	१०
श्रावणमास महात्म्य	०—	८
आषाढमास ,,	०—	६
ज्येष्ठमास ,,	०—	६
प्रश्नोत्तररत्नमाला सटीक	०—	४
कृष्णामृत तरंगिणी ,,	०—	६

टपाल हशील निराळें पडेल

गोपाळ नारायण कंपनी

बुकसेलर्स, मुंबई

ಈ ಮೇಲಿನ ಹಸರುಳ್ಳ ಪುಸ್ತಕಗಳು ... ಕ್ರಯವನ್ನು ಬಹಳ ಕಡಿಮೆ ಮಾಡಿ ... ಇಂಥ ಉಪಯುಕ್ತ ... ಕೊಳ್ಳಬೇಕು ... ಗ್ರಾಹಕರಿಗೆ ... ಕೊಡುವೆವು.

... ಕೆ. ವೆಂಕಟರಮಣ ಶಾಸ್ತ್ರೀ ಸೂರಿ ... ಭಾರತೀ ಪ್ರೆಸ್ಸಿನ ಮ್ಯಾನೇಜರರು.

WEST ... WATCH MANUFACTURERS.



... ಈ ಕಂಪನಿಯ ... ಅಂಗಡಿಯ ... ಘಡಿಯಾಳಗಳು ... ವಾಚುಗಳು ... ಮಾರಾಟಕ್ಕೆ ಇರುತ್ತವೆ ...

...			೨೫-೦-೦
...			೨೦-೦-೦
ಹಂಟಿಂಗ್ (ಸಾದಿ)	೩೦-೧೨-೦		೧೭-೧೨-೦
...	೩೬-೦-೦		೧೯—೦-೦



ಜಂಟರ್ ... ೫೦-೦-೦

... ೫೨-೦-೦

... ೫೦-೦-೦

... ೫೦-೦-೦

... ಇವುಗಳ ಮೇಲಿನ ... ನಮ್ಮ ಕಂಪನಿಯ ... ವಾಚುಗಳನ್ನು ... ತಿಳಿಸಬೇಕು.

ಮುಂಬಯಿ ... ಕಲಕತ್ತ ...

JOHN SONS & Co.

PRAMEHA KUTHARA.

ಪ್ರಮೇಹ ಕುಠಾರ.

ಪುರುಷರಿಗಾಗಲೀ, ಸ್ತ್ರೀಯರಿಗಾಗಲೀ, ದುಷ್ಟಸಂಗದಿಂದ "ಪ್ರಮೇಹ" ವೆಂಬದೆಂದು ಗುಪ್ತ ರೋಗವು ಸಂಭವಿಸುತ್ತದೆ. ಈ ರೋಗವು ಬಿಳಿದು, ಕೆಂಪು, ಕಪ್ಪು, ಹಳದಿ, ಎಂಬ ನಾಲ್ಕು ಪ್ರಕಾರದ ... ಈ ರೋಗದ ಮುಖ್ಯ ಚಿನ್ಹೆಯೂ ... ಮತ್ತು ... ಇವೇ ಮುಂತಾದ ವೇದನೆಗಳು, ಈ ರೋಗವುಳ್ಳವರು ಬಹಳವಾಗಿ ತಮ್ಮ ನಿಜ ಗುಟ್ಟನ್ನು ಇನ್ನೊಬ್ಬರಿಗೆ ತಿಳಿಸುತ್ತಾರೆ. ಈ ರೋಗವುಳ್ಳವರು ಬಹಳವಾಗಿ ... ಇಂಥ ರೋಗವುಳ್ಳವರಿಗೆ ಈ ಸದರಕ್ಕೆ ನಾಚಿಕೆ ಪಟ್ಟು ಈ ರೋಗಕ್ಕೆ ಬಲಿ ಬೀಳುತ್ತಾರೆ ... ಕೇವಲ ಅದ್ಭುತ ಉಪಾಯವಾಗಿರುವದಲ್ಲದೇ ಎಷ್ಟೇ ಹಳೇ ... ಮೂರೇ ದಿವಸದಲ್ಲಿ ಗುಣಪಡಿಸುತ್ತದೆಂದು ನಾವು ವಾಗ್ದಾನ ಮಾಡುತ್ತೇವೆ ... ಬಾಟ್ಲಿಗಳು ಬೇಕಾಗುವವು.

ಪ್ರತಿ ಬಾಟ್ಲಿಯ ... ಭಾಗ ಮಾಡಿರುತ್ತೇವೆ. ದಿನ ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ, ಈ ಮೂರು ಹೊತ್ತಿನಲ್ಲಿ ... ಭಾಗವನ್ನು ... ಪಥ್ಯ, ಮತ್ತು ... ಬಾಟ್ಲಿಗಳನ್ನು ... ಬರೆಯಬೇಕು.

... ಮ್ಯಾನೇಜರ ... ಮುಂಬಯಿ



ಇವರಲ್ಲಿ ಬೇಕಾದ ತರದ ಪುಸ್ತಕಗಳು ಸಿಕ್ಕುತ್ತವೆ.

ನಮ್ಮ ... ಕಣ್ಣಿನ ಕನ್ನಡಕಗಳು ...

೨೦೦ ಚಿತ್ರಗಳ ಕ್ಯಾಟಲಾಗ್.

ತಮ್ಮ ಮನಸ್ಸಿಗೆ ಸರಿಯಾದ ... ಘಡಿಯಾಳ ... ಕೊಳ್ಳಬೇಕೆಂದು ... ಆರ್ಡರ ... ಚೀಟಿ ... ಅವರಿಗೆ ಸುಂದರವಾದ ೨೦೦ ಚಿತ್ರಗಳ ... ಕಳುಹಿಸಲಾಗುವದು.

ಹರಿಕೇಶವ ಗೋಖಲೆ, ವಾಚ್ ಮೇಕರ್ ಮುಂಬಯಿ, ಕಾಂದೆವಾಡಿ ... ರಾಮನ ಚಾಳಿಯ ಎದುರೆ.

ವ್ಯಾಪಾರ ಚಿಂತಾಮಣಿ

ಕನ್ನಡ ವಾರಪತ್ರಿಕೆಯು ಮೈಸೂರಿನ ... ಪ್ರತಿ ಮಂಗಳವಾರ ಪ್ರಕಟವಾಗುತ್ತದೆ.

ವರುಷಕ್ಕೆ ಹಣಸಲು ಶೇರಿ ... ೩-೮-೦

ಆರು ತಿಂಗಳಿಗೆ ,, ... ೨-೮-೦

ವಿದ್ಯಾರ್ಥಿಗಳಿಗೆ, ... ಜನರಿಗೆ ... ವರುಷಕ್ಕೆ ಹಾಸಲು ಶೇರಿ ೩-೮-೦ ... ಬಹಳ ಸುಲಭವಾಗಿ ದೊರೆಯುತ್ತದೆ.

☞ ಯಾವಾಗಲೂ ಚಂದಾಯದ ಹಣವು ಮುಂಗಡವಾಗಿಯೇ ಕೊಡಬೇಕು.

ವ್ಯಾಪಾರ ಚಿಂತಾಮಣಿ ಮ್ಯಾನೇಜರ್.

ನಮ್ಮ ವರ್ಷದ ವಿಶ್ರಾಂತಿಗಾಗಿಯೂ, ದೀಪಾವಳೀ ಹಬ್ಬದ ಸಂಬಂಧವಾಗಿಯೂ ಕಛೇರಿ ಬಾಗಿಲು ಹಾಕಿದನಂತರ ನಮ್ಮ ಮುಂದಿನ ವಾರದ ಪತ್ರಿಕೆಯ ಬಗ್ಗೆ ನಮ್ಮ ವಾಚಕರಿಂದ ಕ್ಷಮೆಯನ್ನು ಪಡೆಯ ಬೇಕೆಂದು ಪ್ರಾರ್ಥಿಸುತ್ತೇವೆ. ಅದ್ದರಿಂದ ಮುಂದಿನ ವಾರದ ಪತ್ರಿಕೆಯು ಹೊರಡಲಿಕ್ಕಿಲ್ಲ.

ಎಡಿಟರ್ ಕ. ಸು.



Karnataka Subodha
ಕರ್ನಾಟಕ ಸುಬೋಧ.

TUESDAY 15, OCTOBER
ತಾರೀಖು ೧೫ನೇ ಅಕ್ಟೋಬರ್

[illegible]

ಸೋಣಿನಿ

[illegible] ಹಸ್ತ ಪತ್ರಿಕಾ [illegible]

[illegible] ಕಾಲಗೆ ಜನಪದಿಯು [illegible] ಬಿಟ್ಟೋಲೇ ಅನ್ಯಜನರೆಂದರೆ [illegible] ನಗರ ನರಾಮ ಅಂದರೆ [illegible] ಜನರ ಪ್ರತಿಭೆಯಿಂದ [illegible]

ಒಬ್ಬ ಮದ್ರಾಸು [illegible] ಸಂದರ್ಶಿಯನ್ನು [illegible] ಮಾಡಿದರು. ಅಲ್ಲಿ [illegible] ಒಂದು ವೇಳೆ ಮನೆಯಲ್ಲಿ [illegible] ಸಂಗತಿಯನ್ನು [illegible] ಎಂದು ಹೇಳಿಕೊಂಡರೆಂದು [illegible]

ಮೈಸೂರು ಮಹಾರಾಜರ ಸ್ವಂತ ಖರ್ಚಿಗೆ [illegible] ಲಕ್ಷ ರೂಪಾಯಿಗಳನ್ನು [illegible]

[illegible] ಭೂತಗಳು [illegible] ನಮ್ಮ ಭೂತಗಳಂಟು, ನಮಗೆ ಭಯವಿಲ್ಲ; [illegible] ಲ್ಲದೇ ಮತ್ತೇನು ಲಾಭವಿಲ್ಲ.

ವರ್ತಮಾನ ಸಾರ

[illegible]

[illegible] ಎಂಬುದು ಇರುತ್ತಿಲ್ಲವೋ? ಅವುಗಳಿಗೆ [illegible] ಜ್ಞಾನವಿದ್ದ ಪಕ್ಷದಲ್ಲಿ [illegible] ಭೂತಗಳನ್ನು [illegible] ಶರೀರ [illegible] ಸ್ವಭಾವದಿಂದ [illegible] ಭೂತಗಳನ್ನು [illegible]

[illegible] ರಾತ್ರಿ [illegible] ಈ ಭೂತಗಳಿಗೆ [illegible]

[illegible]

ಇದನ್ನು ಇಲ್ಲಿ ಕೇಳಿರುವ ವಿದ್ಯಾರ್ಥಿಗಳೆಲ್ಲರೂ ಪ್ರಸನ್ನಾಗಿ ಮರೆಯದೆ ವಿದ್ಯೆ ಕಲಿತು, ಬುದ್ಧಿವಂತರಾಗ ಬೇಕು. ಈ ವಿಷಯದಲ್ಲಿ ನಾನು ವಿದ್ಯಾರ್ಥಿಗಳಿಗೆ ದ್ರವ್ಯಾದಿ ಸಹಾಯದಿಂದ ಕೆಲ್ಸ ವಿದ್ಯಾರ್ಥಿ ವಿದ್ಯಾರ್ಥಿಗಳನ್ನು ವಿದ್ವಾಂಸರನ್ನಾಗಿ ಮಾಡುವ ... ನೆರವಾಗಬೇಕೆಂದು ಪ್ರಾರ್ಥಿಸಿ ಸಭೆಯನ್ನು ಮುಗಿಸಿದರು.

ಆ ನಂತರ ಹುಡುಗರಿಗೆ ಬುಕ್ಕುಗಳು ಕೊಡಲ್ಪಟ್ಟವು. ಮೈಸೂರು ಸರಕಾರದಿಂದ ಸ್ಕೂಲು ಖರ್ಚಿಗೋಸ್ಕರವಾಗಿ ಕೊಡತಕ್ಕ ೧೦೦ ರೂಪಾಯಿಯ ಪ್ರೈಜ್ ಇಟ್ಟಿರ ... ಉದಾರ ... ನಡುಕ ...

ಪತ್ರಿಕಾಕರ್ತರು:—ಇಂಥಾ ಸ್ಕೂಲನ್ನು ನಾನೆಲ್ಲಿಯೂ ನೋಡಿಲ್ಲ ... ಸಂತೋಷವಾಯಿತು. ಎಲ್ಲಾ ಸ್ಕೂಲುಗಳಿಗಿಂತಲೂ ಇಲ್ಲಿ ಅವಿಭಾಗಗಳು ಅಧಿಕವಾಗಿ ... ಮತ್ತು ಈಗ ... ಅವರನ್ನು ... ವೃದ್ಧಿಯನ್ನು ಅಪೇಕ್ಷಿಸುವದು ... ಕೆಲವು ವಾಕ್ಯಗಳನ್ನು ... ನಾನು ವಂದಿಸುವೆನೆಂದು ನುಡಿದರು.

ಬೆಂಗಳೂರು ವೃತ್ತಾಂತವು

ಶ್ರೀ—ಈ ಊರಲ್ಲಿ ಸುಮಾರು ಒಂದು ವಾರದೊಳಗೆ ಪ್ಲೇಗು ವಿಶೇಷವಾಗಿ ಅನೇಕ ಮನೆಗಳು ... ಅಲ್ಲಿ ... ಹೊಸ ಮನೆಯು ... ಒಂದು ವಲಪದ ಹಡಾಗುವ ... ಇಲಿ ... ಸಂತೆಗೆ ... ಕಾಯಿಲೆ ... ಪ್ರದೇಶದಲ್ಲಿ ... ಇಲ್ಲದ ಗೋಡೆಗಳ ಭಾಗದಲ್ಲಿ ... ಅಂತರಿಕ್ಷದಲ್ಲಿ ... ಭೂಮಿಯ ... ಮನೆಗಳು ... ಮುಂದಾಗುವುದು ... ನ ಪಟ್ಟಣ ಕಾಲದು. ನನಗೆ ... ದಿನ ... ಅದರ ಫಲವೇ ಇದು.

ಮನೆ ಅರ್ಜಿ ಕೇಸ್:—ನ್ಯಾಯಾಧೀಶರಲ್ಲಿ ... ವಿಚಾರದಿಂದ ... ಕೈದಿಯು ಒಂದು ತಪ್ಪಿನ ... ನ್ಯಾಯಾಧೀಶರು ... ಹೀಗೆಯೇ ... ಫಲಿತಾಂಶವನ್ನು ... ಪಕ್ಷದಲ್ಲಿ ... ನ್ಯಾಯಾಧೀಶರುಗಳ ... ಕೆಲಸವು ... ಸತ್ಯಾಂಶವು ... ಸಾಕ್ಷಿಗಳಿಂದ ... ಜನರು ... ಪ್ರಯೋಜನವಿಲ್ಲ ... "ಶ್ರೇಯಾಂಸಿ ಬಹು ವಿಘ್ನಾನಿ" ಎನ್ನುವಂತೆ ... ಕಾರ್ಯ ... "ಸಿನ್ನಕಂಠಿ".

READ THIS CARFULLY.

Strong, accurate, pre/ open-faced Nickel silver short winding keyless Railway Regulators, of small size, gilded enamelled dial bold figures and hands showing fine times with tempered mainspring and dust tight cases for Rs 7 8 by V P P with spare glass spring, b and guarantee Warranted to stand rough usage Can be easily repaired Have no appearance of cheapness about them Others sell at double our rates Mr A R Mehta from Bandora says — The 7 8 watch I purchased from you two years back, gives correct time as yet Acting Superintendent Government Farm Khandesh says — A watch maker has valued your Rs 7 8 watch for Rs 15 Mr J Sutcliff R W ... valued it at Rs 15 and were completely surprised when I told them it only costs Rs 7 8 ' Pretty Canadian Gold Chains Lockets, Pencils Complete shirt studs and Rings set with chemical diamonds, rubies &c at Rs 2 each Mr J A Yelsm ... Sutor says — The best goldsmith of this place values the chain for Rs 7 and the locket for Rs 10 Mr G Smith Salt Inspector Samkutla, says — A German valued the diamond ring at Rs 50 and the ruby at Rs 30 Send orders in English and not Vernacular

WESTERN INDIA TRADING CO
BOMBAY

Western India Trading Co.
Bombay.

ಒಹಳ ಬರ್ಚಾಗುವ ಘಡಿಯಾರಗಳು

ಕೀಲಿ ಇಲ್ಲದ ಕೈಲೆ ರೆಗ್ಯುಲೇಟರ ವಾಚುಗಳು. ಕ್ರಯವು ಅತಿಯ ಕಡಿಮೆ ಅಂದರೆ ಪಕ್ಕಾ ೭॥ ರೂಪಾಯಿ ಇರುವದು. ಈ ವಾಚು ಬಹು ಕಾಲ ಪರಿಯಂತರ ಬಾಳತಕ್ಕವಾದದರಿಂದ ಇದರ ಗ್ಯಾರಂಟಿ (ಮುಚ್ಚಳಿಕೆ) ಸಹ ಕೊಡಲ್ಪಡುವದು. ಇದು ನಿಕಲ ಸಿಲ್ವರ ಎಂಬ ಒಂದು ವಿಧದ ಲೋಹದಿಂದ ಮಾಡಿದ್ದು ... ಇಲ್ಲದ್ದಾಗಿರುತ್ತದೆ. ಇದು ಯಾವಾಗಲೂ ಸರಿಯಾಗಿ ಹೊತ್ತನ್ನು ತೋರಿಸುತ್ತದೆ. ಇದರೊಳಗಿನ ಯಂತ್ರಗಳೆಲ್ಲಾ ಒಳ್ಳೇ ಬಲವುಳ್ಳವುಗಳಾಗಿರುತ್ತವೆ. ಇದರ ಕ್ರಯ ಸ್ವಲ್ಪವೆಂತ ಗುಣವು ಸ್ವಲ್ಪವಿರಬಹುದೆಂದು ಯೋಚಿಸಬಾರದು. ಯಾಕೆಂದರೆ ಇದೇ ಜಾತಿಯ ವಾಚುಗಳು ಎರಡರಷ್ಟು ... ಇದರ ಇಮ್ಮಡಿ ಕ್ರಯಕ್ಕೆ ವಿಕ್ರಯಿಸುತ್ತವೆ.

ಈ ವಾಚಿನ ಒಗ್ಗೆ ಒಡೋರೆಯ ಎ. ಆರ್. ಮೆಹಥಾ ಇವರಿಂದಲೂ, ಖಾನ ದೇಶದ ಸರಕಾರಿ ಫಾರ್ಮದ ಸುಪರಿಂಟೆಂಡೆಂಟರವರಿಂದಲೂ ಮುಂತಾದ ಇನ್ನೂ ಎಷ್ಟೋ ಮಂದಿಯಿಂದ ಒಳ್ಳೇ ಸರ್ಟಿಫಿಕೇಟುಗಳು ಒಂದಿರುತ್ತವೆ.

ಈ ವಾಚುಗಳನ್ನು ತೆಗದುಕೊಂಡವರಿಗೆ ಅದು ಅವರಿಗೆ ಯಾವಾಗ್ಗೆ ಒಡಬೇಕೆಂತ ಕಂಡು ಬಂದೀತೋ ಆಗ ಅದರ ಕ್ರಯವನ್ನು ಕೊಟ್ಟು ತಿರಿಗಿ ನಾವು ತೆಗದುಕೊಂಡೇವು. ... ಹೆಸರಿಗೆ ಒರೆಯಬೇಕು.

ವೆಸ್ಟರ್ನ ಇಂಡಿಯಾ
ಟ್ರೇಡಿಂಗ್ ಕಂಪನಿ ಮುಂಬಯಿ.

V. Kamat & Co's;
GOA POWDER.

ವ್ಹಿ. ಕಾಮತ್ ಕಂಪನಿಯವರು ಹೊಸದಾಗಿ ತಯಾರಿಸಿದ "ಗೋವಾ ಪೌಡರ" ಎಂಬುದು ಖಾತ್ರಿಯುಳ್ಳದ್ದಾಗಿಯೂ ರೋಗಿಗಳಿಗೆ ಅತ್ಯಂತ ಉಪಯುಕ್ತವುಳ್ಳದ್ದಾಗಿಯೂ ಇರುತ್ತದೆ ಇದರಿಂದ ಗಜಕರ್ಣ, ದದ್ದು, ಹುಳಕಡ್ಡಿ, ತುರಿಗಜ್ಜಿ ಮುಂತಾದ ಕ್ರಿಮಿ ವಿಕಾರದಿಂದುಂಟಾಗುವ ಚರ್ಮ ರೋಗಗಳು ಬಂದಿರುವ ಸಾರಿ ಹಚ್ಚಿದ ಮಾತ್ರದಿಂದ ಪರಿಹಾರವಾಗುತ್ತವೆ. ಪ್ರತಿ ಬಾಟಲಿಗೆ ೬ನೇ ನಾಲ್ಕು ಆಣೆ ಕ್ರಯವಿಟ್ಟಿರುತ್ತೇವೆ. ಡಜನ್ (೧೨ ಬಾಟಲಿ) ತೆಗದುಕೊಂಡರೆ ೩–೦ ಗೆ ಕೊಡುವೆವು. ಟಪಾಲ್ ಖರ್ಚು ಪ್ರತ್ಯೇಕ ಬಿದ್ದೀತು. ಬೇಕಾದವರು ಮುಂಬಯಿ ಹವ್ಯಕಸುಬೋಧ ಆಫೀಸ್ ಮ್ಯಾನೇಜರ ಕಡೆಗೆ ಬರೆದು ಕಳಿಸಿದರೆ, ವ್ಹ್ಯಾಲ್ಯೂಪೇಬಲ್ ಪಾರ್ಸಲಿನಿಂದ ಕಳಿಸಲ್ಪಡುವದು.

ಮನೋಹರವಾದ
ಪೇಟೆಂಟ ಔಷಧದ ತೆಯಾರಾಗಿ ಬರುವ
ಅತ್ಯಂತ ಸುಗಂಧವುಳ್ಳ
ಪಿತೂನಾ.

ಒಂದು ರೂಪಾಯಿಯಲ್ಲಿ ೬ ತಿಂಗಳ ವರೆಗೆ ನಿಮ್ಮ ತಲೆ ಕೂದಲನ್ನು ಸುವಾಸನೆಯಿಂದ ... ನಾನಾ ತರದ ಹೂವಿನ ಅತ್ತರುಗಳನ್ನು ಕೊಳ್ಳುವವರಲ್ಲಿಯೂ, ಗಂಧದ ಬತ್ತಿ ... ಹೇರಳವಾಗಿ ಹಣ ಖರ್ಚುಮಾಡುವವರು ... ಇಂಥ ಅತ್ಯಂತ ಮಧುರವುಳ್ಳ "ಪಿತೂನಾ" ಎಂಬ ಸುಗಂಧ ... ಪ್ರಯೋಜನ ... ಒಂದು ದ... ತೆಗದುಕೊಂಡು ಪ್ರತಿ ನಿತ್ಯ ತನಗೂ ... ಬಳಸುತ್ತ ಬಂದರೆ, ಸಿರಿವಾದಿಂದ ಆರು ತಿಂಗಳ ... ಇದು ಸಾಧಾರಣ ರೀತಿ ... "ಪಿತೂನಾ" ಎಂಬ ... ತೋರುವದು. ಒಂದು ಡಬ್ಬಿಗೆ ... ಹನ್ನೆರಡು ಡಬ್ಬಿಗಳನ್ನು ಒಟ್ಟಿಗೆ ತೆಗದುಕೊಂಡರೆ ೯ ರೂಪಾಯಿ. ಬೇಕಾದವರು ... ಹವ್ಯಕ ಸುಬೋಧ ಆಫೀಸಿಗೆ ಬರೆಯಬೇಕು.

ಸುಗಂಧ ತೈಲ.

ಇದನ್ನು ... ಹಚ್ಚಿದರೆ ತಲೆನೋವು, ಅರ್ಧ ತಲೆ ನೋವು ಮೊದಲಾದದ್ದು ಕ್ಷಣದಲ್ಲಿ ಗುಣವಾಗುತ್ತದಲ್ಲದೆ, ಬಹು ಸುಗಂಧವಾಗಿರುವದು. ಮತ್ತು ನೆತ್ತಿಗೆ ತಂಪು ಕೊಡುವಂಥಾದ್ದು. ... ಗುಣವುಳ್ಳ ... ಇದನ್ನು ನೆತ್ತಿಗೆ ಹಚ್ಚಬೇಕು. ... ಕೂದಲುಗಳು ... ಇದನ್ನು ... ಪ್ರತಿ ನಿತ್ಯ ತಲೆಗೆ ಹಾಕಿಕೊಳ್ಳುತ್ತಾ ಬಂದರೆ ... ದಿವಸ ... ಒಂದು ... ಆಣೆ, ಹನ್ನೆರಡು ಡಬ್ಬಿಗಳನ್ನು ಒಟ್ಟಿಗೆ ತೆಗದುಕೊಂಡರೆ ೫ ರೂಪಾಯಿ.

ಬಹಳ ಉತ್ತಮವಾದ ಹೂವಿನ ಅತ್ತರುಗಳು.

ಒಮ್ಮೆಗೆ ಪಾತ್ರ ನೋಡಿರಿ!!

ಅತ್ತರುಗಳ ಹೆಸರು		ತೊಲೆ ೧ರ ಕ್ರಯ		
ಗುಲಾಬಿ		೨	೦	೦
ಹಿನಾ		೨	೦	೦
ಮಲ್ಲಿಗೆ		೨	೦	೦
ದಾಜ		೨	೦	೦
ಕೋಲು ಸಂಪಿಗೆ		೨	೦	೦
ಕೇದಿಗೆ		೨	೦	೦
ಸುಗಂಧರಾಜ	(ಶಾಣ)	೨	೦	೦
[illegible]		೨	೮	೦
ಜೂಯಿ		೨	೮	೦
ಕೇಶರ	„	೨	೦	೦
ಗುಲಛಡಿ	(ಶಾಣ)	೨	೦	೦
ಕಸ್ತೂರಿ	„	೨	೦	೦
ಪಚ್ಚೆ	(ಮಣ್ಣು)	೨	೦	೦
ಪಚ್ಚೆತೆನೆ	„	೨	೦	೦
ದವನ	„	೨	೦	೦
ಲವಂಗ	„	೨	೦	೦

ತ್ವಗ್ರೋಗಗಳ ಮೇಲೆ ಉತ್ತಮ ಮುಲಾಮು

ಇದು ಚರ್ಮಸಂಬಂಧವಾದ ವಿಶಿಷ್ಟ ರೋಗಗಳ ಮೇಲೆ ಬಹಳ ಗುಣಕಾರಿಯಾಗಿದ್ದರಿಂದ ಗಜಕರ್ಣದ ಮೇಲೆ ಅತ್ಯಂತ ನಂಬಿಕೆಯುಳ್ಳ ಔಷಧವಾಗಿರುತ್ತದೆ. ಈ ತರದಿಂದ ವಿಶೇಷವಾಗಿ ಗಜಕರ್ಣವನ್ನು ದೂರಪಡಿಸುವದೆಂದು ನಾವು ಖಾತ್ರಿ ನುಡಿವರಾಗುವೆವು ... ಒಟ್ಟುವದ ರೋಗಕ್ಕೆ ಇದು ... ಪ್ರತಿ ಡಬ್ಬಿಗೆ ... ಡಜನ್ ... ಈ ಮೇಲಿನ ಸಾಮಾನುಗಳೆಲ್ಲಾ ... ಉಂಟೋ ... ಆಫೀಸಿಗೆ ಬರೆದರೆ ... 'ಹವ್ಯಕ ಸುಬೋಧ' ... ವ್ಹ್ಯಾಲ್ಯೂಪೇಬಲ್ ... ರವಾನಿಸಲ್ಪಡುವದು.

ಅಪೋಕ್ಷ ಪಾನುಭೂತಿ.

ವಸಿಷ್ಠ ಋಷಿಯಿಂದ ಹೇಳಲ್ಪಟ್ಟ ವೇದಾಂತ ಜ್ಞಾನಪರವಾದ ಶ್ರೀ ಯೋಗವಾಸಿಷ್ಠವೆಂಬ ಕನ್ನಡ ಪದ್ಯ ಕಾವ್ಯವನ್ನು ನಾವು ಛಾಪಿಸುತ್ತಿದ್ದೇವೆ. ಇದು ಬಹು ಉತ್ತಮ ಗ್ರಂಥವಿದ್ದು ... ಛಾಪಿಸಿ ಪಟ್ಟದಿಯಿಂದ ... ೧೦೦ ನರಂಪಗಳ ... ಇದರ ಸುಮಾರು ... ಸಾವಿರ ಪದ್ಯಗಳಿದ್ದು ... ಒಳಗೆ ... ಛಾಪಿಸಿ ... ಮುಂಗಡ ಚಂದಾದಾರರಿಗೆ ಮಾತ್ರವೇ ೩ ರೂ. ... ಟಪಾಲಿನಲ್ಲಿ ಕಳುಹಿಸುವ ಖರ್ಚು ೪ ಆಣೆ ಪ್ರತ್ಯೇಕ ಬೀಳುವದು.

ಕೆ. ವೆಂಕಟರಮಣಶಾಸ್ತ್ರಿ ... ಸೂರಿ,
ವ್ಯಾ. ಹ. ಸು. ಆಫೀಸ್, ಮುಂಬಯಿ.

D. DINKAR-RAO'S
Most Efficacious Patent Medicines.
ಕಂಪೌಂಡ ಜರ್ಮೇಕಾ ಮತ್ತು ಇಂಡಿಯನ್ ಸಾರ್ಸಪರಿಲಾ.

ರಕ್ತಶುದ್ಧಿಯ ಮೇಲೆ ಉತ್ತಮ ತರವಾದ ಔಷಧ.

ಈ ಸಾರ್ಸಪರಿಲವೆಂಬ ಔಷಧಿಯಿಂದ ಉಪದಂಶಜನ್ಯ ವಿಕಾರದಿಂದ ಶರೀರದ ಮೇಲೆ ಆಗತಕ್ಕ ಕೆಟ್ಟ ಪರಿಣಾಮಗಳು ಅಂದರೆ ಸರ್ವಾಂಗದ ಮೇಲೆಯೂ ಕ್ಷತೆ ಬೀಳುವದು, ಸಂಧುಗಳು ನೋಯುವದು, ಕೈಕಾಲುಗಳ ... ಉರಿ, ಹಾಗೂ ಸರ್ವಾಂಗ ತುರಿಕೆ, ಮೊದಲಾದ ರಕ್ತ ದೋಷದಿಂದುಂಟಾಗುವ ಎಲ್ಲ ವಿಧದ ರೋಗಗಳ ಮೇಲೂ ಈ ಔಷಧಿಯು ಉಪಯೋಗಿಸಲ್ಪಡುತ್ತವೆ. ಉದಾಹರಣಾರ್ಥ:—ಅಶಕ್ತತೆ, ಬುದ್ಧಿ ಮಾಂದ್ಯ, ಕಜಿತಿರುಕು, ಮೈಮೇಲೆ ಬಚ್ಚೆಗಳಾಗುವದು, ಗಂಡಮಾಲೆ ಪ್ರಮೇಹವಿಕಾರದಿಂದುಂಟಾದ ಕಟಿಶೂಲಾದಿ ವಿಕಾರಗಳು ದೂರವಾಗುತ್ತವೆ. ಪಥ್ಯ—ಮಧುರ ಹುಳಿ ಮೆಣಸು ತಿನ್ನಬಾರದು. ಕಿಮ್ಮತ್ತು ಬಾಟ್ಲಿಗ್ಗೆ ೧ ರೂ. ಟ. ಖ. ೧೦ ಆ.

ವೀರ್ಯಸ್ತಂಭಕ ಕಾಮೋತ್ತೇಜಕ ಮತ್ತು ಧಾತು ಪೌಷ್ಟಿಕ ಶಿಲಾಜಿತ ಮಿಶ್ರಿತ ಪಾಸ್ಪರಸದ ಗುಳಿಗೆಗಳು.

ಅತಿಶ್ರಮದಿಂದ ಅಥವಾ ಅತಿ ವಿಷಯೋಪಭೋಗದಿಂದ ಕಟಿ ಹಗ್ಗುರವಾಗುವದೂ, ಮೊಣಕಾಲು ಕೆಡುವದೂ, ತಲೆ ತಿರುಗುವದೂ, ಕತ್ತಿನೋಯುವದೂ, ಹಸಿವೆಯೂ ಗಡಿಬಿಡಿಯದೂ, ಮತ್ತು ಶರೀರ ಕ್ಷೀಣವಾಗಿ ಅಶಕ್ತತೆಯುತ್ಪನ್ನವಾಗುವದೂ, ಇಂದ್ರಿಯವು ತೆಳ್ಳಗಾಗುವದೂ, ಗರ್ಮಿಯು ಮತ್ತು ಎರಡನೇ ಎಷ್ಟೋ ವಿಧದ ರೋಗಗಳಿಂದ ಸ್ತ್ರೀ ಸಂಭೋಗದ ಕಾಲದಲ್ಲಿ ಸ್ಪರ್ಶ ಮಾತ್ರ ಪತನವಾಗೋಣ ವಗೈರೆ ವಿಕಾರಗಳು ನಾಶವಾಗುತ್ತವೆ. ಕಿಮ್ಮತ್ತು ೩ ತಡನ್ ಇರುವ ಬಾಟ್ಲಿಗೆ ೧೪ ಆಣೆ. ಟಪಾಲು ಖರ್ಚು ೬ ಆಣೆ.

ಪ್ರಮೇಹ.

ಪರಮಾ ಎಂಬ ಸ್ತ್ರೀ ಸಂಪರ್ಕದಿಂದ ಹರಿಯುವ ರೋಗದಿಂದ ಸಾವಿರಾರು ಜನರು ಬಹಳ ಹೈರಾಣ ಪಡುತ್ತಾರೆ. ಮತ್ತು ಅದರಿಂದ ಬಿಡುಗಡೆಯನ್ನು ಹೊಂದಲಿ ಕ್ಕೋಸ್ಕರ ಒಪೀರಿಂಗವಾಗಿ ಎರಡನೇಯವರಿಂದ ಔಷಧಗಳ ಉಪಚಾರಗಳನ್ನು ನಡಸಲಿಕ್ಕೆ ಒಲ್ಲೆಯಾಗುತ್ತದೆ. ಇದರಿಂದ ಆ ರೋಗವು ದಿನ ದಿನಕ್ಕೆ ಪ್ರಬಲವಾಗುತ್ತದೆ. ಆದ್ದರಿಂದ ಈ ಔಷಧವನ್ನು ತಯಾರ ಮಾಡಿದ್ದೇವೆ. ಇದರಿಂದ ಮೂತ್ರ ಕಡಿಮೆಯಾಗುವದೂ, ಅಥವಾ ಅಧಿಕವಾಗುವದೂ, ಹಾಗೂ ಮೂತ್ರ ವಿಸರ್ಜನ ಕಾಲದಲ್ಲಿ ಬಹಳ ಉರಿಯುವದೂ, ಬಹಳ ವೇದನೆಯಾಗುವದೂ, ಮುಂತಾದ ಪ್ರಮೇಹ ಲಕ್ಷಣಗಳು ಇಲ್ಲದಂತಾಗಿ ಪ್ರಮೇಹ ರೋಗವು ನಾಲ್ಕೇ ದಿವಸಗಳಲ್ಲಿ ಗುಣ ಹೊಂದುತ್ತದೆ. ಕಿಮ್ಮತ್ತು ೧ ಬಾಟ್ಲಿಗೆ ೧ ರೂ. ಟ. ಖ. ೧೦ ಆ.

ಕಾಮಲಿಗೆ ಹಚ್ಚುವ ತೈಲವು.

ಈ ತೈಲವನ್ನು ಹಚ್ಚುವದರಿಂದ ಕೂದಲು ಕೆಂಪು ಅಥವಾ ಅರೆಕೆಂಪು ಕೂದಲುಗಳು ಕಪ್ಪಾಗುತ್ತವೆ ... ಕಿಮ್ಮತ್ತು ೧ ಬಾಟ್ಲಿಗೆ ೧ ರೂ. ಟ. ಖ. ೬ ಆಣೆ.

ರುಚಿಕಾರಕ ಪಾಚನ ಕ್ಷುಧಾವರ್ಧಕ ಗುಳಿಗೆಗಳು.

ಈ ಗುಳಿಗೆಗಳನ್ನು ತಿನ್ನೋಣದರಿಂದ ಒಳ್ಳೇ ರೀತಿಯಿಂದ ಅನ್ನ ಪಚನವಾಗಿ ಶೌಚ ಮಲ ಶೋಧನವಾಗುತ್ತದೆ. ಅನ್ನದ ಮೇಲಿನ ಇಚ್ಛೆ ಯಾಗುವದಲ್ಲದೆ ಬಾಯಿಗೆ ರುಚಿ ಒದಗುತ್ತದೆ. ಒಂದು ಡಬ್ಬಿಯಲ್ಲಿ ೩೪ ಗುಳಿಗೆಗಳಿರುತ್ತವೆ. ಪ್ರತಿ ಒಂದು ಡಬ್ಬಿಗೆ ೬ ಆಣೆ ಟ. ಖ. ೧೦ ಆಣೆ.

ಪೌಷ್ಟಿಕ ಸ್ನಾಪ್.

ಈ ಔಷಧ ಸೇವನೆಯಿಂದ ... ತಾಸು ಇಲ್ಲದಂತೆ ಆಗುತ್ತದೆ. ಮೂತ್ರದಲ್ಲಿ ಯಾಗಲೀ ಅಥವಾ ಮಲದಲ್ಲಿಯಾಗಲಿ ಧಾತು ಹೋಗುತ್ತಿದ್ದರೆ, ಅಂಥವರು ಇದನ್ನು ಅವಶ್ಯವಾಗಿ ಸೇವಿಸಬೇಕೆಂದು ನಾವು ಶಿಫಾರಸ್ ಮಾಡುತ್ತೇವೆ. ಪ್ರತಿ ಒಂದು ಬಾಟ್ಲಿಗೆ ೧ ರೂ. ಟ. ಖ. ೧೦ ಆಣೆ.

ಜ್ವರದಸ್ತದ ಮೇಲೆ ಉತ್ತಮ ಗುಳಿಗೆ ಮತ್ತು ಮುಲಾಮ್.

ಮನುಷ್ಯನನ್ನು ಅಶಕ್ತನಂತನನ್ನಾಗಿ ಮಾಡುವದಕ್ಕೂ, ಪ್ರೇತವಂತನನ್ನಾಗಿ ಮಾಡುವದಕ್ಕೂ, ಈ ಜ್ವರದಂಥ ಕೆಟ್ಟ ರೋಗವು ಬೇರೊಂದಿರುವದಿಲ್ಲ. ಇದು ಥಂಡಿ ಜ್ವರ ಬರುವಾಗ ಉಂಟಾದ ಅಸ್ವಾಸ್ಥ್ಯದಿಂದುಂಟಾಗುತ್ತದೆ. ... ಇದು ಎರಡು ದಿವಸ ... ಇದರಿಂದ ಅನೇಕರು ದುರದೃಷ್ಟದಿಂದ ... ಗುಳಿಗೆ ... ಮಲಮುಗಳಿಂದ ... ಮಲಮ್ ಡಬ್ಬಿ ೧ಕ್ಕೆ ೬ ಆಣೆ ಟ. ಖ. ೬ ಆಣೆ.

ಜ್ವರದ ಗುಳಿಗೆ.

ಈ ಗುಳಿಗೆಗಳಿಂದ ಪ್ರತಿ ನಿತ್ಯ ಬರುವ, ಅಥವಾ ದಿನ ಬಿಟ್ಟು ದಿನ ಬರುವ, ಅಥವಾ ಚಾತುರ್ಥಿಕ, ಮತ್ತು ಕರಡು ವಿಷಮಜ್ವರ ಮುಂತಾದವು ಬಿಟ್ಟು ಹೋಗುವವು. ಜ್ವರ ಬರುವ ೪ ತಾಸಿನ ಮುಂಚೆ ಪ್ರತಿ ತಾಸಿಗೆ ಒಂದೊಂದು ಗುಳಿಗೆಯಂತೆ ೪ ಗುಳಿಗೆಗಳನ್ನು ತಣ್ಣೀರಿನ ಸಂಗಡ ನುಂಗಬೇಕು. ಯಾವ ದಿವಸ ಜ್ವರದ ಭರಿ ಇರುವದಿಲ್ಲವೋ ಆ ದಿವಸ ೩ ಹೊತ್ತಿನಿಂದ ೩ ಗುಳಿಗೆ ತೆಗದುಕೊಳ್ಳಬೇಕು. ಮೈಮೇಲೆ ಜ್ವರವಿದ್ದ ಕಾಲದಲ್ಲಿ ಮಾತ್ರ ಗುಳಿಗೆ ಸೇವನ ಮಾಡಬಾರದು. ೧ ಡಬ್ಬಿ ಗುಳಿಗೆಗಳಿಗೆ ೮ ಆಣೆ. ಟ. ಖ. ೬ ಆಣೆ.

ದಂತ ಶುದ್ಧಿ.

ಪ್ರತಿನಿತ್ಯ ಹಲ್ಲನ್ನು ಉಜ್ಜುವಾಗ ಈ ಹುಡಿಯನ್ನು ಉಪಯೋಗಿಸಬೇಕು. ಇದರಿಂದ ಹಲ್ಲಿನ ಸಂದಿಯಿಂದ ರಕ್ತ ಒಸರುವದು ನಿಲ್ಲುತ್ತದಲ್ಲದೆ ಹಲ್ಲುಗಳು ಸ್ವಚ್ಛವಾಗುತ್ತವೆ. ಮತ್ತು ಬಾಯಿಯು ದುರ್ಗಂಧವಿಲ್ಲದಂತಾಗಿ ಸುವಾಸನೆಯುಂಟಾಗುವದು. ಡಬ್ಬಿ ೧ಕ್ಕೆ ೬ ಆಣೆ. ಟ. ಖ. ೬ ಆಣೆ.

ಸಂಧಿವಾತದ ಮೇಲೆ ಉತ್ತಮ ಔಷಧ.

ಅನೇಕರಿಗೆ ಸಂಧಿವಾತವೆಂಬ ಕಠಿನ ವಿಕಾರವು ಉದ್ಭವಿಸಿ ಪೀಡಿಸುತ್ತದೆ. ಸಂಧಿವಾತವೆಂದರೆ, ವಾಯುವಿನ ವಿಕಾರದಿಂದ ಶರೀರದ ಸಂಧಿಸ್ಥಾನಗಳಲ್ಲಿ ರಕ್ತಸಂಚಾರವಿಲ್ಲದಂತಾಗಿ ಸಂಧುಗಳು ನೋಯುವದು. ಈ ರೋಗದ ಮೇಲೆ ನಮ್ಮ ಔಷಧ ಬಹಳ ಗುಣಕಾರಿಯಾಗಿರುತ್ತದೆ. ದಿನಕ್ಕೆ ೩ ಸಾರಿ ಇದರಲ್ಲಿಯ ಕಾಲು ತೊಲೆ ಔಷಧವನ್ನು ತಣ್ಣೀರಿನಲ್ಲಿ ಬೆರಸಿ ಕುಡಿಯಬೇಕು. ವಾಯು ಪದಾರ್ಥಗಳನ್ನು ಬಿಡಬೇಕು. ಬಾಟ್ಲಿ ೧ಕ್ಕೆ ೧೨ ಆಣೆ ಟ. ಖ. ೬ ಆಣೆ.

ಡಿ. ದಿನಕರರಾವ್,
ಶೂಪಟಾಟಿ ವಾಡಿ ಠಾಕೂರದ್ವಾರ, ಮುಂಬಯಿ.

Printed and Published for Bood Mahabaleshwar Bhatta Proprietor of Havyak Subodha, by K. V. Shastri at the BHARATEE PRESS Thakurdwar Bombay

ಮೋಹನ್ ಗ ಹೆಗಡೆ, ಎಂ.ಎ., ಪಿಎಚ್.
ಕನ್ನಡ ಪತ್ರಿಕಾ ಸಂಗ್ರಾಹಕರು.

ದ್ದು ಸುಳ್ಳು. ಇದನ್ನು ಹವ್ಯಕ ಸುಬೋಧದ ಈಗಿನ ಗೀಚುಗುರು ಎಡಿಟರರು ಇಲ್ಲೇ ನಿರ್ಮಿಸಿದ್ದು ಎಂತ ನಾವು ಮೊದಲೂ ಹೇಳಿದ್ದೇವೆ, ಈಗಲೂ ಹೇಳುತ್ತೇವೆ." ಎಂತ ಕನ್ನಡ ಸುವಾರ್ತೆ ಕರ್ತರು ಅತಿ ನಿಜತ್ವದಿಂ ಬರೆಯುತ್ತಾರೆ. ಇವರಿಗೆ ಇಷ್ಟು ನಿಜತ್ವದಿಂದ ಬರೆಯಲಿಕ್ಕೆ ಯೋಗ್ಯ ಆಧಾರವ್ಯಾವದು? ಒಂದು ವೇಳೆ ಆ ಪತ್ರವು ಧಾರವಾಡದಿಂದ ಬರಲ್ಲಿವೆಂತ ಕಂಡ ಒಂದಿದ್ದರೂ ಈಗಿನ ಗೀಚುಗುಳ ಎಡಿಟರರೇ ಅದನ್ನು ನಿರ್ಮಿಸಿದರೆಂತ ಇವರಿಗೆ ಹ್ಯಾಗೆ ತಿಳಿಯಿತು? ಇವರು ಕನ್ನಡ ಸುವಾರ್ತೆಯ ಹಾಪೀಸಿನಲ್ಲಿ ಕೂತು ಮನಸ್ಸಿಗೆ ಬಂದಂತೆ ಗೀಚಲಿಕ್ಕೆ ಕೂರುವ ಇದೆ ಮೇಲೆ ನಾರದ ಮುನೀಶ್ವರರು ಪ್ರತ್ಯಕ್ಷವಾಗಿ ಬಂದು ಇವರಿಗೆ ತಿಳಿಸಿ ಹೋದರೋ? ಇವರಿಗೆ ಸಂಶಯ ಒಂದಿದ್ದರೆ ಪತ್ರದಲ್ಲಿ ಅದರಂತೆ ನಮಗೆ ಸೂಚನೆ ಮಾಡಿದ್ದಲ್ಲಿ ನಾವು ಯೋಗ್ಯ ರೀತಿಯಿಂದ ಉತ್ತರ ಕೊಡುತ್ತಿದ್ದೆವು. ಎಡಿಟರರಿಗೆ ಯೋಗ್ಯವಾದ ಇಂಥ ಮಾರ್ಗವನ್ನು ಬಿಟ್ಟು ಅತಿ ನೀಚತನದಿಂದ ನಮ್ಮ ಯೋಗ್ಯತೆಯನ್ನೂ ಹಾಗೂ ನಮ್ಮ ಗುಣಾವಗುಣಗಳನ್ನೂ ಕುರಿತು ಟೀಕಿಸುವರೆ ಇವರಿಗೆ ಮತ್ಸರದ ಹೊರತು ಬೇರೆ ಏನೂ ಕಾರಣವಿದ್ದಿಲ್ಲವೆಂಬದು ಎಲ್ಲರಿಗೂ ಸಹಜವಾಗಿ ಕಂಡುಬಂದೀತು. ಈ ತರದ ಮತ್ಸರವೂ ಹಾಗೂ ದ್ವೇಷವೂ ಇಲ್ಲಿಂದ ಬಹಳ ದೂರದಲ್ಲಿದ್ದ ಅವುಗಳ ಮೂಲಸ್ಥಾನದಿಂದ, ಅತಿ ವಿಸ್ತೀರ್ಣವಾದ ಸಮುದ್ರ ಪ್ರದೇಶವನ್ನು ದಾಟಿ ಈ ಮುಂಬಯಿ ಪಟ್ಟಣಕ್ಕೆ ಬಂದಿರಬಹುದೆಂದು ನಾವು ಇದುವರೆಗೂ ತಿಳಿದಿದ್ದಿಲ್ಲ. ಆದರೆ ಹೋದವಾರದ ಕನ್ನಡ ಸವಾರ್ತೆಯು, ಇದು ಎಲ್ಲ ಕರ್ನಾಟಕ ಪ್ರಾಂತದವರಿಗೂ- ಮುಖ್ಯವಾಗಿ ಎಲ್ಲ ಕಾರವಾರ ಜಿಲ್ಲೆಯ ನಿವಾಸಿಗಳಿಗೂ- ತಿಳಿಯುವಂತೆ ಪ್ರಸಿದ್ಧ ರೀತಿಯಿಂದ ಇದನ್ನು ಪ್ರಕಟಿಸಿದ ಬಗ್ಗೆ ನಾವು ಬಹಳ ದುಃಖ ಪಡುತ್ತೇವೆ.

ನಾವು ಎಷ್ಟರ ಮಟ್ಟಿಗೆ „ಅಪ್ರಮಾಣಿಕತನ ಮತ್ತು ನಾಚಿಕೆ, ಲೋಕಾಪವಾದದ ಭೀತಿ, ಅಪ್ರಮಾಣಿಕತನದ ಭಯ, ಮುಂತಾದ ಗುಣಗಳನ್ನೆಲ್ಲ ಒಂದು ಕಡೆ ಮೊಟ್ಟೆಕಟ್ಟಿಟ್ಟವರೂ" ಎಂಬದೂ, ಹಾಗೂ ಕನ್ನಡ ಸುವಾರ್ತೆಯವರು ಎಷ್ಟು ಪ್ರಮಾಣಿಕರೂ, ಸತ್ಯವಾದಿಗಳೂ, ನ್ಯಾಯಮೂರ್ತಿಗಳೂ, ಸುಗುಣಿಗಳೂ, ವಿದ್ವಾಂಸರೂ, ಮಹಾಮುದ್ಧರೂ, ಕಲ್ಪನಾ ಚತುರ್ಯವುಳ್ಳವರೂ ಮತ್ತು ನ್ಯಾಯಶಾಸ್ತ್ರಜ್ಞರೂ, ಎಂಬದು ಸಹ ನಮ್ಮ ಮೇಲಿನ ಎಲ್ಲ ಬರವಣಿಗೆಯನ್ನು ಲಕ್ಷ ಕೊಟ್ಟು ಓದಿದ ನಮ್ಮ ವಾಚಕರ ಮನಸಿನಲ್ಲಿ ಬಾರದೆ ಉಳಿದಿರಲಿಕ್ಕಿಲ್ಲ. ಆಯ್ಯೋ ವಿಚಾರವೆ! ನಿಮ್ಮಲ್ಲಿ ಯಾರಿಗಾದರೂ, „ಪ್ರಮಾಣಿಕತನ, ಲೋಕಾಪವಾದದ ಭೀತಿ ಅಪ್ರಮಾಣಿಕತನದ ಭಯ" ಮುಂತಾದ ದೊಡ್ಡ ದೊಡ್ಡ ಶಬ್ದಗಳ ಯೋಗ್ಯವಾದ ಅರ್ಥವನ್ನು ಕಲಿಯಬೇಕೆಂತಿದ್ದರೆ, ಮುಂಬಾಯಿಗೆ ಒಂದು ಸಾರೆ ಯಾದಲ್ಲಿಯೂ, ಕನ್ನಡಸುವಾರ್ತೆಯ ಎಡಿಟರರ ಕಾಲಿಗೆ ದಿನ ೧೦ ಸಾರೆ ಬೀಳಿ! "ಅಂದರೆ ಅವರು ಮೇಲಿನ ಎಲ್ಲ ಶಬ್ದಗಳಿಗೂ, ಸರಿಯಾದ ಅರ್ಥವುಳ್ಳ ಒಂದು ವಾಕ್ಯವನ್ನು ಕಲಿಸುವರು. ಅದೇನೆಂದರೆ „ತಾನು ಕಳ್ಳ ಪರರ ನಂಬ." ಇರಲಿ. ಆದರೆ ಮೇಲಿನ ಉದ್ದವಾದ ಬರವಣಿಗೆಯಿಂದ ನಮ್ಮ ವಾಚಕರುಗಳಿಗೂ ಬಹಳ ಬೇಜಾರು ಬಂದಿರಬಹುದು. ಆದರೆ ಉಪಾಯವಿಲ್ಲದ ಕಾರಣ ನಮಗೆ ಇಷ್ಟೆಲ್ಲ ಬರೆಯಬೇಕಾಯಿತು. ಇನ್ನು ಕನ್ನಡ ಸುವಾರ್ತೆಯವರು ನಮ್ಮ ಪತ್ರದ ಭಾಷೆಯ ಬಗ್ಗೆ ಹಾಗೂ ನಮ್ಮ ಗೀಚು ಗುಳ ಬರವಣಿಗೆಯ ಬಗ್ಗೆ ಬಹಳ ಉದ್ದವಾದ ಟೀಕೆ ಮಾಡಿದ್ದಾರೆ. ಅದರ ಬಗ್ಗೆ ಸ್ವಲ್ಪವಾದರೂ ಬರೆಯುವದು ನಮಗೆ ಅತ್ಯವಶ್ಯಕವಾದದ್ದರಿಂದ ಇನ್ನೊಮ್ಮೆ ನಮ್ಮ ವಾಚಕರು ತಮ್ಮ ಲಕ್ಷವನ್ನ ನಮ್ಮ ಕಡೆಗೆ ಹಚ್ಚಬೇಕೆಂತ ಪ್ರಾರ್ಥಿಸುತ್ತೇವೆ.

ಕನ್ನಡ ಸುವಾರ್ತೆಯವರು ನಮ್ಮ ಭಾಷೆಯ ಬಗ್ಗೆ ಬಹಳ ದೋಷ ಕೊಟ್ಟು ಕೆಲವು ಉದಾಹರಣೆಗಳನ್ನು ತಮ್ಮ ಪತ್ರದಲ್ಲಿ ಕೊಟ್ಟಿದ್ದಾರೆ. ಆದರೆ ಆ ಉದಾಹರಣೆಗಳನ್ನು ಯಾವ ಭಾಗದಿಂದ ತೆಗದು ಕೊಂಡಿದ್ದಾರೆ? ನಮ್ಮ ಬರವಣಿಗೆಯಿಂದಲೋ? ಅಲ್ಲ, ನಮ್ಮ ಬಾತಮೀದಾರರಾದ ಧಾರವಾಡಕರರ ಬರವಣಿಗೆಯಿಂದ ಕೆಲವು ದೋಷಗಳನ್ನು ತೆಗೆದು ಆ ತಪ್ಪುಗಳ ಬಗ್ಗೆಯಾಗಿ ನಮ್ಮ ಮೇಲೆ ಬೈಗಳದ ಮಳೆಯನ್ನು ಸುರಿಸುತ್ತಾರೆ. ಇಷ್ಟೆಲ್ಲ ಬೈಗುಳಗಳಿಂದ ತುಂಬಿ ಕೊಂಡಿರುವ ಅವರ ಶಬ್ದಗಳ ನಿಘಂಟಾದರೂ, ಎಷ್ಟು ದೊಡ್ಡದಪ್ಪಾ! ಆದರೆ ಎಲ್ಲ ಸಂಗತಿಯನ್ನು ಅತಿ ನೀಚತನದಿಂದಲೂ, ಕುಯುಕ್ತಿಯಿಂದಲೂ, ಟೀಕಿಸಬೇಕೆಂಬ ಬುದ್ಧಿಯಿಂದಲೇ, ನಾಚಿಕೆಯನ್ನು ಬಿಟ್ಟು, ನಮ್ಮ ವಿದ್ವಾಂಸರಾದ ಎಡಿಟರರಿಗೆ ವಿಚಾರವೆಲ್ಲಿ! ಜನುಜ್ಞ ಎಲ್ಲಿ! ಧಾರವಾಡಕರರ ಪತ್ರದಲ್ಲಿರುವ ತಪ್ಪಿಗೆ ಸಹ ಹವ್ಯಕ ಸುಬೋಧದ ಎಡಿಟರರನ್ನು ಗುರಿ ಮಾಡಿ ಬಿಟ್ಟರೆ ಆಯಿತು. ನಮ್ಮ ಮಹ ಪುರುಷರ ದುಷ್ಟಮಾಂಛ ಪೂರ್ಣವಾದಂತಾಯಿತು. ಇರಲಿ!!

ಇನ್ನೊಬ್ಬರನ್ನು ಬೇಕೆಂತಲೇ, ನಿಂದಿಸುವ ಕನ್ನಡಸುವಾರ್ತೆಯವರಿಗೆ ವ್ಯಾಕರ್ಣಸೂತ್ರವನ್ನು ಕಲಿಸಿ ಕೊಟ್ಟ ಮಹಾ ಪುರುಷನ್ಯಾರೋ? ಇವರ ಕನ್ನಡ ಬರವಣಿಗೆಯ ಬಗ್ಗೆ ನಾವು ಮೌನಕೊಡುತ್ತೇವಾದರೂ, ಇನ್ನೊಬ್ಬರನ್ನು ಅವರ ಭಾಷೆಯ ಸಲುವಾಗಿ ಮನಸ್ಸಿಗೆ ಒಂದಂತೆ ನಿಂದಿಸುವರೆ ಕನ್ನಡ ಸುವಾರ್ತೆಯವರು ಕನ್ನಡ ಭಾಷೆಯಲ್ಲಿ ಪ್ರವೀಣರಲ್ಲವೆಂತಲೂ ಅನೇಕ ಸರ್ತಿ ಅವರ ಬರವಣಿಗೆಯಲ್ಲಿ ತಪ್ಪುಗಳಿರುತ್ತವೆಂತಲೂ ನಾವು ಸ್ಪಷ್ಟವಾಗಿ ಹೇಳುತ್ತೇವೆ. ಯಾವ ಪತ್ರದಲ್ಲಿ ಅವರು ನಮ್ಮ ವಿಷಯವಾಗಿ ಬಹಳ ಬರೆದಿದ್ದಾರೋ ಅದೇ ಪತ್ರದಲ್ಲಿ ತಾವು ವ್ಯಾಕರಣ ಸಮ್ಮಂಧವಾದ ಎಷ್ಟೋ ತಪ್ಪುಗಳನ್ನು ಮಾಡಿರುತ್ತಾರೆ. ಅಂಥ ತಪ್ಪುಗಳನ್ನು ಅವರಂತೆಯೇ ನೀಚತನದಿಂದ ಹುಡುಕುತ್ತ ಕೂಡ್ರುವದು ನಮಗೆ ಶೋಭಿಸುವದಿಲ್ಲ. ಆದರೆ ತಿಳಿದು ಆ ತಪ್ಪುಗಳನ್ನು ಯಾಕೆ ತಿದ್ದಿಸಲಿಲ್ಲವೆಂತ ಅವರು ಕೇಳ್ಯಾರ, ಆದ್ದರಿಂದ ಅವುಗಳ ಪೈಕಿ ಬಹು ಸ್ವಲ್ಪ ತಪ್ಪುಗಳನ್ನು ಇಲ್ಲಿ ಕೊಡುತ್ತೇವೆ.

೧ ಪಕ್ಷಪಾತ ಬೇಡಾಕ್ಕೆ -ದಲ್ಲಿ ಪಕ್ಷಪಾತ ಬೇಕ್ಕವೆ ಪು ಕನ್ನಡ ಸುವಾರ್ತೆ ಕರ್ತರು ಯಾವ ನಿಘಂಟಿನಿಂದ ಉತ್ಪನ್ನ ಮಾಡಿದರೋ?

೨ ಧಾರವಾಡ ಪತ್ರದ ನಿಜತ್ವವು ಧಾರವಾಡ ಪತ್ರ- ಎಂಬ ಸವಾಸವು ಯಾವ ಕನ್ನಡ ಭಾಷೆಯ ವ್ಯಾಕರ್ಣದ ನಿಯಮಾನುಸಾರ ಉಂಟಾಯಿತೋ? ಇದರಂತೆಯೇ ನಾಶಿಕ ಪತ್ರ, ಕಾರವಾರ ಪತ್ರ, ಸುರತ ಪತ್ರ, ಮುಂತಾದ ಸಮಾಸಗಳು ಯಾವ ಅರ್ಥದಿಂದ ಆದವೋ?

೩ ಹಿಂದೂ ಧರ್ಮಾಭಿಮಾನಿಗಳು (ಯಾವ ವ್ಯಾಕರ್ಣಕ್ಕೆ ಸರಿಯಾಗಿದೆ)

೪ ಪ್ರಜೆಗಳ ದ ಚುನಾಯಿತ ಪ್ರತಿನಿಧಿಗಳು ಸ್ವತಂತ್ರವಾಗಿಯೂ...... ಮೂಲ ಕರ್ತೃಂದವರಾಗಿಯೂ ಸ್ವಭಾವವುಳ್ಳವರಾಗಿಯೂ ಇರುತ್ತಾರೆ (ಈ ವಾಕ್ಯದಲ್ಲಿ ಸ್ವತಂತ್ರವಾಗಿಯೂ ಎಂಬದು ತಪ್ಪು. ಅದು ಸ್ವತಂತ್ರರಾಗಿಯೂ ಎಂತ ಬೇಕು)

೫ ನ್ಯಾಯಾಧೀಶರು ಇದಕ್ಕೆ ಯೋಗ್ಯವಾಗಲಿಲ್ಲ (ಯೋಗ್ಯರಾಗಲಿಲ್ಲ ಎಂತ ಬೇಕು.)

ಇನ್ನು ಇಂಥ ಬೇರೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು ಆದರೆ ಈ ಉದಾಹರಣೆಗಳ ಮೇಲಿಂದಲೇ ಅವರ ಭಾಷೆಯ ಸಂಬಂಧವಾಗಿ ಟೀಕೆ ಮಾಡುವದಕ್ಕೆ ನಾವು ಇಚ್ಛಿಸುವದಿಲ್ಲ. ಇದರಂತೆಯೇ ನಮ್ಮ ಪತ್ರದಲ್ಲಿಯೂ ಎಷ್ಟೋ ತಪ್ಪುಗಳು ಸಿಕ್ಕ್ಯಾವೆಂತ ನಾವು ಒಪ್ಪುತ್ತೇವೆ. ಆದರ ಕನ್ನಡ ಸುವಾರ್ತೆಯವರಂತೆ ಬೇರೆಯವರ ತಪ್ಪು ತೆಗದು ನಮ್ಮ ಪಾಂಡಿತ್ಯವನ್ನು ಹೆಚ್ಚಿಸಲಿಕ್ಕೆ ನಾವು ಇಚ್ಛಿಸುವದಿಲ್ಲ. ಕನ್ನಡಸುವಾರ್ತೆಯವರು ಕಾರಣವಿಲ್ಲದೆ, ಹೊಟ್ಟೆಕಿಚ್ಚಿನ ಮೂಲಕ ನಾವು ಅಪ್ರಮಾಣಿಕರಂತೆ ಬರೆಯುತ್ತಾರಷ್ಟೇ! ಇವರು ತಾವು ಅಪ್ರಮಾಣಿಕರಾಗಿರುವದರಿಂದಲೇ ಹಾಗೆ ಬರೆಯುತ್ತಾರೆಂತ ನಾವು ತಿಳಿಯುತ್ತೇವೆ. ಇವರು ತಮ್ಮ ಸತ್ರದ ಪ್ರಾರಂಭದಲ್ಲಿಯೇ ಅದು „ಪ್ರತಿ ಶುಕ್ರವಾರ ಪ್ರಾತಃಕಾಲ ಹೊರಡುತ್ತದೆ." ಎಂತ ದೊಡ್ಡ ಅಕ್ಷರಗಳಿಂದ ಬರೆದಿದ್ದು, ನಮ್ಮನ್ನು ನಿಂದಿಸುವ ಭರದಲ್ಲಿ ಏನುಬರೆಯುತ್ತಾರೆಂದರೆ —„ ಹೋದವಾರದ ಕನ್ನಡ ಸುವಾರ್ತೆಯು ಒಂದು ದಿನ ವಿಳಂಬವಾಗಿ ಹೊರಟದ್ದರಿಂದ ಹೊರ ಊರಿಗೆ ಹೋಗುವ ಪತ್ರಗಳು ಶನಿವಾರದ ಟಪಾಲಿನಿಂದ ಹೋಗದೆ ಆದಿತ್ಯವಾರದ ಟಪಾಲಿನಿಂದ ಹೋದವು." ಇವರ ಪ್ರಮಾಣಿಕತನವನ್ನು ಎಷ್ಟೆಂತ ವರ್ಣಿಸುವದು! ಇವರ ಪತ್ರವು, ಸ್ಪಷ್ಟವಾಗಿ ದೊಡ್ಡ ಅಕ್ಷರಗಳಿಂದ ಬರೆದಂತೆ ಶುಕ್ರವಾರ ಬೆಳಗ್ಗೆ ಹೊರಡುವದಾದರೆ ಯಾವಾಗಲೂ ಶುಕ್ರವಾರದ ಟಪಾಲಿನಿಂದಲೇ ಹೊರ ಊರುಗಳಿಗೆ ಯಾಕೆ ಹೋಗುವದಿಲ್ಲ? ಶುಕ್ರವಾರ ಬೆಳಗ್ಯೆ ಹೊರಡುವ ಪತ್ರಗಳಿಗೆ ಇಲ್ಲಿಂದ ೧ ಘಂಟೆಗೆ ಹೊರಡುವ ಟಪಾಲು ಸಿಕ್ಕುವದಿಲ್ಲವೋ? ಹೊರ ಊರಿಗೆ ಹೋಗುವ ಪತ್ರಗಳ ವಿಷಯವಾಗಂತೂ ಈ ಮಾತು ಆಯಿತು. ಮುಂಬಯಿಯಲ್ಲಾದರೂ ಇವರ ಪತ್ರವು ಶುಕ್ರವಾರ ಬೆಳಗ್ಯೆ ಆಗಲೀ ಅಥವಾ ಸಾಯಂಕಾಲವಾಗಲೀ ವಿಲಾಸದಾರರ ಕೈಗೆ ಸಿಕ್ಕುತ್ತದೆಯೋ? ಅದು ಶುಕ್ರವಾರ ಬೆಳಗ್ಯೆ ಹೊರಡುವದಾದರೆ ಮುಂಬಯಿಯವರಿಗೆ ಬೆಳಗ್ಗೆ ಯಾಕೆ ಸಿಕ್ಕಬಾರದು? ಅಥವಾ ಸಾಯಂಕಾಲಕ್ಕಾದರೂ ಸಿಕ್ಕಬೇಕಷ್ಟೆ! ಮಂಗಳವಾರ ಬೆಳಗ್ಯೆ ಹೊರಡುವ ನಮ್ಮ ಪತ್ರವು ಮಂಗಳವಾರದ ಟಪಾಲಿನಿಂದಲೇ ಹೊರ ಊರಿಗೆ ಹೋಗುವದಿಲ್ಲವೋ? ಇದೇ ಇವರ ಪ್ರಮಾಣಿಕತನವೋ? ಇತ್ತಲಾಗಿ ೨ ವರುಷಗಳಿಂದ ಕನ್ನಡ ಸುವಾರ್ತೆಯು ಶುಕ್ರವಾರದ ಬೆಳಗ್ಯೆ ಹೊರಡದೆ ಶುಕ್ರವಾರ ರಾತ್ರಿ ೧೦ ಘಂಟೆಯ ಮೇಲೆ ಸಹ ಮುದ್ರಿಸಲ್ಪಡುತ್ತಿರವಬಹುದೆಂತ ಕನ್ನಡ ಸುವಾರ್ತೆಯವರು ಖಾತ್ರಿಯಾಗಿ ಹೇಳಲಿಕ್ಕೆ ಸಿದ್ಧರಿದ್ದಾರೋ! ಹೀಗಿರುತ್ತಾ ಪ್ರತಿ ಶುಕ್ರವಾರ ಬೆಳಗ್ಯೆ ಹೊರಡುತ್ತದೆಂಬ ಅಪ್ರಮಾಣಿಕ ವಾಕ್ಯವನ್ನು ಯಾಕೆ ಬರೆಯಬೇಕು? ತಾವು ಖರೆಯಾಗಿಯೂ ಅಪ್ರಮಾಣಿಕರಿದ್ದು ಮತ್ತೊಬ್ಬರನ್ನು ಮನಸ್ಸಿಗೆ ಒಂದಂತೆ ಯದ್ವಾತದ್ವಾ ಬೈಯುವದರಿಂದ ಮಾತ್ರ ತಮ್ಮ ದೊಡ್ಡಸ್ತಿಕೆಯನ್ನು ವೃದ್ಧಿಸುವದಕ್ಕೆ ಇಚ್ಛಿಸುವದು ಎಂಥ ನೀಚತನವು!!!

ನಾವು ಒರೆ ಬರೆಯುತ್ತಾ ನಮ್ಮ ಲೇಖವನ್ನು ಬಹಳ ಬೆಳಸಿದ್ದೆವು ಹಾಗೂ, ನಮ್ಮ ವಾಚಕರಿಗೂ, ಓದಿ ಓದಿ ಬೇಜಾರು ಬಂದಿರಬಹುದು. ಆದ್ದರಿಂದ ಇನ್ನು ಒಂದೆರಡು ವಾಕ್ಯಗಳನ್ನು ಬರೆದು ನಾವು ನಮ್ಮ ಲೇಖವನ್ನು ಮುಗಿಸುತ್ತೇವೆ.

ವರ್ತಮಾನ ಪತ್ರಕರ್ತರು ಕಾರಣವಿಲ್ಲದೆ ತಮ್ಮ ಬಂಧುಗಳನ್ನು ನಿಂದಿಸುವದು ಸರಿಯಲ್ಲ! ಇದು ಕನ್ನಡಸುವಾರ್ತೆಯವರಿಗೆ ಹ್ಯಾಗೆ ತಿಳಿಯಲಿಲ್ಲವೋ! ಹೊಟ್ಟೆಕಿಚ್ಚು ಹಾಗೂ, ದ್ವೇಷವಿದ್ದರೆ ಅವುಗಳನ್ನು ಬೇರೆ ಕೆಲಸಗಳಲ್ಲಿ ಉಪಯೋಗಿಸ ಬಹುದಿತ್ತು. ವರ್ತಮಾನ ಪತ್ರವು ಆ ಕೆಲಸದ ಬಗ್ಗೆ ಸ್ಥಳವಲ್ಲ. ನಾವು ನಮ್ಮ ಮಿತ್ರರಾದ ಕನ್ನಡಸುವಾರ್ತೆಯವರಿಗೆ ಸೂಚಿಸುವದೇನಂದರೆ, ಅವರು ಅತಿ ನಿಂದ್ಯಾಸ್ಪದವಾದ ಹೊಟ್ಟೆಕಿಚ್ಚಿಗೆ ಇನ್ನಾದರೂ, ತಮ್ಮ ಹೃದಯದಲ್ಲಿ ಸ್ಥಳ ಕೊಡದೆ, ಅದಕ್ಕೆ ದೊರೆತ ಈ ಚಿಕಿತ್ಸೆಯು ಸರಿಯಾಗಿ ನಾಟಬೇಕೆಂತ ಪಥ್ಯಮಾಡಿ, ಅದನ್ನು ಯಾವತರದಿಂದಲಾದರೂ, ತಮ್ಮ ಹೃದಯದಿಂದ ದೂರ ಅಡಿಸಿ, ತಾಯಿಯ ಸ್ತನ್ಯಾಮೃತವನ್ನು ಪ್ರಾಶಿಸುತ್ತಿರುವ ಸಣ್ಣ ಅರ್ಭಕನಂತೆ ನಡಿಯುವದು ಬಿಟ್ಟು, ಸುಜ್ಞಗೃಹಸ್ಥರಂತೆ ಜ್ಞಾನಾಮೃತವನ್ನು ಪ್ರಾಶನ ಮಾಡಿ ಒಳ್ಳೆ ರೀತಿಯಿಂದಲೇ ಲೇಖವನ್ನು ಬರೆಯುತ್ತ ಬರ ಬೇಕು.

ಸ್ಫುಟವಿಷಯ.

ನಮ್ಮ ಬಂಧುಗಳಾದ ಕನ್ನಡಸುವಾರ್ತೆ ಕರ್ತರು ತಮ್ಮ ಕಳೆದ ೪೯ನೇ ಅಂಕಿಯಲ್ಲಿ ನಮ್ಮ ವಿರುದ್ಧವಾಗಿ ಬಹಳೇ ನಿಂದ್ಯಾಸ್ಪದವಾದ ಲೇಖವನ್ನು ಬರೆದಿದ್ದು ನಾವು ಅಪ್ರಮಾಣಿಕರೆಂತಲೂ, ಸುಳ್ಳುಗಾರರೆಂತಲೂ, ಸಿದ್ಧ ಪಡಿಸುವದಕ್ಕೆ ಯತ್ನಿಸಿರುತ್ತಾರಾದ್ದರಿಂದ, ಅವರು ನಮ್ಮ ಮೇಲೆ ಹೊರಿಸಿದ ಅವರ ಆರೋಪಗಳನ್ನು ಪೂರ್ಣವಾಗಿ ದೂರ ಪಡಿಸುವದಕ್ಕೋಸ್ಕರ ನಾವು ಇದೇ ಪತ್ರದ ೨ನೇ ಪೇಜಿನಲ್ಲಿ ಎಲ್ಲ ಸಂಗತಿಗಳನ್ನು ವಿವರಿಸಿದ್ದೇವೆ. ನಮ್ಮ ವಾಚಕರು ಅದನ್ನು ದಯಮಾಡಿ ಲಕ್ಷಕೊಟ್ಟು ಓದುವರಾಗಿ ನಾವು ಆಶಿಸುತ್ತೇವೆ.

ಈಗ ಇದರ ಇನ್ನೊಂದು ಭಾಗದಲ್ಲಿ ಒಂದು ಪತ್ರವ್ಯವಹಾರವನ್ನು ಪ್ರಕಟಿಸಿರುತ್ತೇವೆ. ಈಭಾಗದಲ್ಲಿ ಒಮ್ಮೆಗೆ ನಮ್ಮ ಮನಸ್ಸು ವ್ಯಕ್ತಿ ಸಂಬಂಧವಾದ್ದರಿಂದ ಅನುಮೋದಿಸಿದರೂ, ನಮ್ಮ ನಿಷ್ಪಕ್ಷಪಾತತನವು ಹಾಗೆ ಮಾಡಗೊಡಲಿಲ್ಲಾ. ಈ ಭಾಗದಲ್ಲಿ „ನ್ಯಾಯಾನ್ಯಾಯ ವಿಷಯವಕ್ತನ್ನು„ ಒರದೆ ವಿಷಯಕ್ಕೆ ಪ್ರತ್ಯುತ್ತರವಿದ್ದರೆ ನಮ್ಮ ಮಠಾಧಿಕಾರಿಗಳು ನಮ್ಮ ಕಡೆಗೆ ಕಳುಹಿಸಿದರೆ ಅದಕ್ಕೆ ಅವಶ್ಯಕವಾಗಿ ನಾವು ಸ್ಥಳ ಕೊಟ್ಟೇವು. ಮಠಾಧಿಕಾರಿಗಳು ಈಗ ಬಹಳ ವಿಚಾರದಿಂದಲೂ, ನಿರಭಿಮಾನ ಹಾಗೂ ನಿಷ್ಪಕ್ಷಪಾತತ್ವದಿಂದಲೂ, ಕೆಲಸ ನಡೆಯುತಕ್ಕದು ಉಚಿತವಾಗಿರುತ್ತದೆಂದು ನಾವು ಹೇಳುತ್ತೇವೆ.

ಬದ್ರೂವಾದಾ ಎಂಬಲ್ಲಿಯ ರೇಲ್ವೆದಾರಿಯು ಆಗಿಯುವ ಕೆಲಸವನ್ನು ಕೆಲವು ಕೂಲಿಕಾರರು ಮಾಡುತ್ತಿರುವಾಗ್ಯೆ ಗುಡ್ಡದಿಂದ ಒಂದು ಕಲ್ಲಿನ ಗುಡಿ ಹತ್ತಿತು. ಅದರ ಬಾಗಿಲ ತರೆದು ನೋಡುವಷ್ಟರಲ್ಲಿ ಒಳಗೆ ಒಬ್ಬ ಯೋಗಿಯು ಅವರ ದೃಷ್ಟಿಗೆ ಬಿದ್ದನು. ಅವನ ಉಗುರುಗಳು ೯ ಇಂಚು ಉದ್ದವಿತ್ತು. ಜಡೆಗಳು ೯ ಫೂಟು ಉದ್ದ ಇದ್ದವು ಇವರು ಒಳಗೆ ಹೋದ ಕೂಡಲೇ „ ಪ್ರಭು ಒಂದನೇನು?" ಎಂದು ಕೇಳಿದನು. ಅದಕ್ಕೆ ಇವರು ಎಲ್ಲಿಯ ಪ್ರಭುವೇನೂ ಗೊತ್ತಿಲ್ಲ ಅಂದರು. ಆ ಮೇಲೆ ಯೋಗಿಯು „ಕಲಂಕಿ" ಪ್ರಭು ಬರಲಿಲ್ಲೇ ಅಂದನು. ಅದಕ್ಕೆ ಕೂಲಿಗಾರರು ಇಲ್ಲ ಅಂದರು. ಯೋಗಿಯು ತನ್ನ ಕೈ ಬೊಟ್ಟುಗಳನ್ನು ಎಣಿಸಿದಂತೆ ಲೆಖ್ಖಮಾಡಿ „ಹಾದು ಅವನು ಬರಲಿಕ್ಕೆ ಇನ್ನೂ ಏಳು ವರುಷ ಅವಕಾಶವದೆ ಬಾಗಿಲು ಮುಚ್ಚಿಬಿಡಿರಿ, ಅಂದಿನ ವರೆಗೆ ನಾನು ಇಲ್ಲೇ ಇರ ಬೇಕು" ಎಂದು ಹೇಳಿದನು. ಇದು ಆಶ್ಚರ್ಯವೋ ಸುಳ್ಳೋ? ಗಾಳಿಯ ಸಂಚಾರ ವಿಲ್ಲದಂಥ ಸ್ಥಳದಲ್ಲಿ ಇವನ ಜೀವ ಹ್ಯಾಗೆ ಉಳಿಯಿತು ಕ. ಪ್ರ.

ಶ್ರೀ ಸ್ವಾಮಿ ಮಠ ಶೃಂಗೇರಿ ಇವರ ನೆಪದ ಪತ್ರ-ಪ ಟ ತ ದಾಖಲೆಯನ್ನು ಧಾರವಾಡ ಕೋರ್ಟಿನಲ್ಲಿ ನೆಲೆಗೊಳಿಸಿ ಕೊಂಡು ಕಳೆದ ಶನಿವಾರ ಹೊಂಬಳಕ್ಕೆ ಹೋಗಿ ಮೂರನೇ ದಿವಸ ನವಲಗುಂದಕ್ಕೆ ದಯ ಮಾಡಿಸಿದರು. ಅಲ್ಲಿ ಎರಡು ದಿವಗಳು ನಿಂತು, ನವಲಗುಂದಕ್ಕೆ ಹೋಗ ತಕ್ಕವರು, ಅಲ್ಲಿಂದ ರಾಮದುರ್ಗ, ಮುಧೋಳ ಮಾರ್ಗವಾಗಿ ನವರಾತ್ರಿ ಉತ್ಸವಕ್ಕೆ ಜಮಖಂಡಿಗೆ ದಿಗ್ವಿಜಯ ಮಾಡತಕ್ಕವರೆಂದು ಕೇಳುತ್ತೇವೆ. ಕಳೆದ ಶುಕ್ರವಾರ ದಿನ ಕಾರ್ತಿಕೋಟಿಯಲ್ಲಿ ೬-೭ ಸಹಸ್ರ ಜನರು ಕೂಡಿದ್ದು ಚಾತುರ ಮಾಸ್ಯಕ್ಕೆ ಕೂತದ್ದನ್ನು ಮುಗಿಸಿ ಏಳುವ ಸಮಾರಂಭವು ವರ್ಣನೀಯವಾಯಿತಂತೆ ದೊಡ್ಡವರದೆಲ್ಲಾ ದೊಡ್ಡದೇ! ಇಲ್ಲಿಗೆ ಬಾರದೆ ಪುನರಪಿ ನವಲಗುಂದಕ್ಕೆ ಹೋದದ್ದರ ಕಾರಣ ಮೇನಿರ ಬಹುದು. ಶ್ರೀಗಳವರನ್ನು ಇಲ್ಲಿಗೆ ದಯಮಾಡಿಸ ಬೇಕೆಂಬದಾಗಿ ಇಲ್ಲಿಂದ ಕರಿಯಲಿಕ್ಕೆ ಹೋಗಿರಲಿಕ್ಕಿಲ್ಲೇನು?

ಪತ್ರ ಕಳುಹಿಸಿದವರಿಗೆ ಸೂಚನೆ.

ಪ್ರಜಾಪಕ್ಷಪಾತಿ, ಸಾಗರ— ತಮ್ಮ ಪತ್ರವು ಕಾಲವಾಗಿ ನಿಲ್ಲಿಸಲ್ಪಟ್ಟಿದೆ ಮುದ್ರಿಸ ಲ ಆಕ್ಕೆ.

